ಲಿಖಿತ ಮೂಲಕ
ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೨

**ಪಟ್ಟಿ – ೨೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಬುಧವಾರ, ದಿನಾಂಕ : ೧೮ನೇ ನವೆಂಬರ್, ೨೦೧೫.**

---

## ಸಮೂಹ – III

೧. ಅರಣ್ಯ ಸಚಿವರು.

೨. ಕಂದಾಯ ಸಚಿವರು.

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು.

೫. ಸಣ್ಣ ನೀರಾವರಿ ಸಚಿವರು.

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು.

೭. ಕಾರ್ಮಿಕ ರಾಜ್ಯ ಸಚಿವರು.

---

# ಹಾಸನ ಜಿಲ್ಲೆಯಲ್ಲಿ ಆನೆ ಹಾವಳಿ ತಡೆಯಲು ಕೈಗೊಂಡಿರುವ ಕ್ರಮಗಳ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೫೪ (೨೫೨೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಜಿಲ್ಲೆಯ ಸಕಲೇಶಪುರ/ ಅರಕಲಗೂಡು/ಆಲೂರು ತಾಲ್ಲುಕುಗಳಲ್ಲಿ ನಿರಂತರವಾಗಿ ಆನೆಗಳು ದಾಳಿ ಮಾಡುತ್ತಿದ್ದು ಇದಕ್ಕೆ ಶಾಶ್ವತ ಪರಿಹಾರ ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಆಯವ್ಯಯದಲ್ಲಿ ಆನೆ ಹಾವಳಿ ತಡೆಗೆ ಘೋಷಣೆಯಾದ ಕ್ರಮ ಮತ್ತು ನಿಗಧಿಪಡಿಸಿರುವ ಮೊಬಲಗೆಷ್ಟು ; ಇವುಗಳ ಅನುಷ್ಠಾನ ಮಾಡಿರುವ ಕುರಿತು ವಿವರ ನೀಡುವುದು ?

# ಸರ್ಕಾರಿ ಜಮೀನು ಒತ್ತುವರಿ ಬಗ್ಗೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೫೫(೨೪೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈ ಹಿಂದೆ ಜಂಟಿ ಸದನ ಸಮಿತಿಯು ಅಧ್ಯಕ್ಷರಾಗಿದ್ದ ಶ್ರೀ ಎ.ಟಿ. ರಾಮಸ್ವಾಮಿ ಅವರ ಸಮಿತಿ ಮತ್ತು ಶ್ರೀ ಬಾಲಸುಬ್ರಹ್ಮಣ್ಯ ರವರ ವರದಿ ಪ್ರಕಾರ ರಾಜ್ಯಾದಾದ್ಯಂತ ಒತ್ತುವರಿ ಆಗಿರುವ ಜಮೀನು ಎಷ್ಟು ; (ಜಿಲ್ಲಾವಾರು ಅಂಕಿ ಸಂಖ್ಯೆ ನೀಡುವುದು)

(ಆ) ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಮೀನಿನ ಪೈಕಿ ಇಲ್ಲಿಯವರೆಗೆ ಎಷ್ಟು ಎಕರೆ ಜಮೀನನ್ನು ತೆರವುಗೊಳಿಸಲಾಗಿದೆ ; (ಜಿಲ್ಲಾವಾರು ಅಂಕಿ–ಅಂಶ ನೀಡುವುದು)

(ಇ) ಬೆಂಗಳೂರಿನಲ್ಲಿ ಇನ್ನು ಯಾವ ಯಾವ ಬಡಾವಣೆಗಳಲ್ಲಿ ಎಷ್ಟೆಷ್ಟು ಎಕರೆ ಜಮೀನನ್ನು ತೆರವುಗೊಳಿಸಬೇಕಾಗಿದೆ ; ವಿಳಂಬಕ್ಕೆ ಕಾರಣವೇನು ; ಬೆಂಗಳೂರನ್ನು ಹೊರತು ಪಡಿಸಿ ಬೇರೆ ಜಿಲ್ಲೆಗಳಲ್ಲಿ ಅಷ್ಟು ಸಮರ್ಪಕವಾಗಿ ಸರ್ಕಾರಿ ಜಮೀನು ಒತ್ತುವರಿದಾರರನ್ನು ತೆರವುಗೊಳಿಸಲು ಸಾಧ್ಯವಾಗುತ್ತಿಲ್ಲದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ, ಇತರೆ ಜಿಲ್ಲಾಧಿಕಾರಿಗಳ ಮೇಲೆ ಸರ್ಕಾರ ಜರುಗಿಸಿರುವ ಕ್ರಮಗಳೇನು ; (ವಿವರ ನೀಡುವುದು)

(ಉ) ಸರ್ಕಾರಿ ಜಮೀನನ್ನು ಒತ್ತುವರಿದಾರರಿಂದ ತೆರವುಗೊಳಿಸಿದ ನಂತರ ಆ ಜಮೀನಿನ ಸ್ಥಿತಿಗತಿ ಏನು ; (ವಿವರ ನೀಡುವುದು)

(ಊ) ಒತ್ತುವರಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ವಿಶೇಷ ಕಾನೂನನ್ನು ಜಾರಿಗೆ ತರಲಾಗಿದೆಯೇ ; ಹಾಗಿದ್ದಲ್ಲಿ, ಇತ್ತೀಚೆಗೆ ತರಲಾದ ಕಾನೂನಿನ ಆದೇಶ ಪ್ರತಿಯನ್ನು ಒದಗಿಸುವುದು ;

(ಋ) ಕೇಂದ್ರ ಸರ್ಕಾರ ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಇತ್ತೀಚೆಗೆ ಕಾನೂನು ಆದೇಶ ಹೊರಡಿಸಿದೆಯೇ ; ಹಾಗಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು ;

(ಎ) ಸರ್ಕಾರಿ ಜಮೀನನ್ನು ಕಳೆದ ಒಂದು ವರ್ಷದಿಂದ ಯಾವ ಯಾವ ಸಂಸ್ಥೆಗೆ ಮಂಜೂರು ಮಾಡಲಾಗಿದೆ ? (ಮಂಜೂರಾತಿ ನೀಡಿದ ಆದೇಶದ ಪ್ರತಿಗಳೊಂದಿಗೆ ವಿವರ ನೀಡುವುದು)

## ಆಲೂರು ಐಟಿಐ ಕಾಲೇಜಿಗೆ ಕಟ್ಟಡ ಒದಗಿಸುವ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೫೬(೨೫೨೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಲೂರು ಸರ್ಕಾರಿ ಐಟಿಐ ಕಾಲೇಜಿನಲ್ಲಿ ಯಾವ ಯಾವ ವಿಭಾಗಗಳಿವೆ ; ಎಷ್ಟು ವಿದ್ಯಾರ್ಥಿಗಳು ಓದುತ್ತಿದ್ದಾರೆ ;

(ಆ) ಆಲೂರು ತಾಲ್ಲೂಕು ಕೇಂದ್ರದಲ್ಲಿರುವ ಏಕೈಕ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ (ಐಟಿಐ) ಸ್ಥಳಾವಕಾಶವಿಲ್ಲದೆ ಕಸಬಾ ಸೊಸೈಟಿಗೆ ಸೇರಿದ ಅಕ್ಕಿಗಿರಣಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ, ಸಮರ್ಪಕವಾದ ಕೊಠಡಿಗಳಿಲ್ಲದೆ ಕಟ್ಟಡವೂ ಸಹ ಸಂಪೂರ್ಣ ಶಿಥಿಲಗೊಂಡ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಸದರಿ ಐಟಿಐ ಕಟ್ಟಡಕ್ಕೆ ಸೂಕ್ತ ಕಟ್ಟಡ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬರ ಪೀಡಿತ ಹಾಸನ ಜಿಲ್ಲೆಯಲ್ಲಿ ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮಗಳ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೫೭(೨೫೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ಜಿಲ್ಲೆಯ ಬಹುತೇಕ ತಾಲ್ಲೂಕುಗಳು ಬರಪೀಡಿತವೆಂದು ಘೋಷಣೆ ಮಾಡಿದ್ದು ಇಲ್ಲಿ ಸರ್ಕಾರ ಕೈಗೊಂಡಿರುವ ಪರಿಹಾರ ಕಾರ್ಯಕ್ರಮಗಳೇನು ;

(ಆ) ಹಾಸನ ಜಿಲ್ಲೆಯಾದ್ಯಂತ ಮುಂಗಾರು ವೈಫಲ್ಯದಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಆಹಾರದ ಕೊರತೆ ಉಂಟಾಗಿರುವುದು ನಿಜವೇ ; ಹಾಗಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬರಗಾಲದಿಂದ ರೈತರ ಬೆಳೆ ಹಾನಿಗೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಅಣೆಕಟ್ಟುಗಳಲ್ಲಿರುವ ನೀರನ್ನು ಕೆರೆ ಕಟ್ಟೆಗಳಿಗೆ, ಕುಡಿಯುವ ನೀರಿಗಾಗಿ ಹರಿಸಲು ಕೈಗೊಂಡಿರುವ ಕ್ರಮಗಳೇನು ?

## ಮಂಡ್ಯ ನಗರದ ಒಳಾಂಗಣ ಕ್ರೀಡಾಂಗಣದ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೫೮ (೨೫೦೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ನಗರದಲ್ಲಿ ಒಳಾಂಗಣ ಕ್ರೀಡಾಂಗಣದ ಕಾಮಗಾರಿಯು ಆಮೆಗತಿಯಲ್ಲಿ ಸಾಗುತ್ತಿದ್ದು ಈಗ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಕಳೆದ ಮಾರ್ಚ್, ೨೦೧೫ರ ಅಧಿವೇಶನದಲ್ಲಿ ತ್ವರಿತವಾಗಿ ಪೂರ್ಣಗೊಳಿಸುವುದಾಗಿ ಭರವಸೆ ನೀಡಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ; ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ತಲೆದೋರಿರುವ ಅತಿವೃಷ್ಠಿ ಮತ್ತು ಅನಾವೃಷ್ಠಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೫೯(೨೫೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದಾಗಿ ಭೀಕರ ಬರಗಾಲವನ್ನು ಎದುರಿಸುತ್ತಿರುವ ತಾಲ್ಲೂಕುಗಳು ಯಾವುವು ; ಮಾಹಿತಿ ಹಾಗೂ ರಾಜ್ಯ ಸರ್ಕಾರ ನೀಡಿರುವ ಆರ್ಥಿಕ ಪರಿಹಾರ ಎಷ್ಟು ; (ತಾಲ್ಲೂಕುವಾರು ಸಮಗ್ರ ವರದಿಯನ್ನು ನೀಡುವುದು)

(ಆ) ಕೇಂದ್ರ ಸರ್ಕಾರವು ಬರಪೀಡಿತ ಪ್ರದೇಶಗಳಿಗೆ ಇಲ್ಲಿಯವರೆಗೂ ನೀಡಿರುವ ಆರ್ಥಿಕ ನೆರವಿನ ಪ್ರಮಾಣ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನೆರವಿನಿಂದ ಇದುವರೆವಿಗೂ ಕೈಗೊಂಡಿರುವ ಪರಿಹಾರ ಕ್ರಮಗಳೇನು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಅರಣ್ಯ ಇಲಾಖೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೬೦(೨೫೦೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ೨ ವರ್ಷಗಳಲ್ಲಿ ಅರಣ್ಯ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು; (ವಿಧಾನ ಸಭಾ ಕ್ಷೇತ್ರವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಇ) ಸದರಿ ಕಾಮಗಾರಿಗಳಿಗೆ ಖರ್ಚಾಗಿರುವ ಹಣ ಎಷ್ಟು; ಉಳಿಕೆಯಾದ ಮೊತ್ತ ಎಷ್ಟು; (ಕಾಮಗಾರಿವಾರು, ವರ್ಷವಾರು ಮಾಹಿತಿ ನೀಡುವುದು)

(ಈ) ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು; ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಉ) ಪ್ರಗತಿಯಲ್ಲಿರುವ ಕಾಮಗಾರಿಗಳು ಎಷ್ಟು; ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲಾಗುವುದು ; ಇದಕ್ಕೆ ರೂಪಿಸಲಾಗಿರುವ ರೂಪರೇಷೆಗಳು ಯಾವುವು ? (ವಿವರ ನೀಡುವುದು)

## ಮೀನುಗಾರರ ಅಭಿವೃದ್ಧಿ ಯೋಜನೆಗಳು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೬೧(೨೫೦೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೀನುಗಾರರ ಅಭಿವೃದ್ಧಿಗೆ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; (ತಾಲ್ಲುಕುವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಮೀನುಗಾರರ ವಸತಿ ಸೌಕರ್ಯ ಕಲ್ಪಿಸಲು ರೂಪಿಸಿರುವ ಯೋಜನೆಗಳಾವುವು ; (ಮಾಹಿತಿ ಒದಗಿಸುವುದು)

(ಇ) ಈ ಜಿಲ್ಲೆಯಲ್ಲಿ ಎಷ್ಟು ಮೀನುಗಾರರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಜಿಲ್ಲೆಯಲ್ಲಿ ತೆರೆಯಲಾಗಿರುವ ಒಟ್ಟು ಮೀನು ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು; ಜಿಲ್ಲೆಯ ಯಾವ ಯಾವ ಸ್ಥಳದಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಸಕಾಲದ ಸೇವೆಗಳ ಅರ್ಜಿಗಳು

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೬೨(೨೫೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಕಾಲದ ಸೇವೆಗಳ ಅಡಿಯಲ್ಲಿ ೨೦೧೪–೧೫ ಮತ್ತು ೨೦೧೫–೧೬ರ ಸಾಲಿನಲ್ಲಿ ಇಲಾಖಾವಾರು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಕೆಲವು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅರ್ಜಿ ಸ್ವೀಕರಿಸಿ ಹಲವಾರು ತಿಂಗಳು ವಿಲೇವಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕಾಲ ಸೇವೆಗಳ ಅಡಿಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಅರ್ಜಿಗಳಲ್ಲಿ ವಿಲೇವಾರಿ ಆಗಿರುವ ಸಂಖ್ಯೆ ಎಷ್ಟು; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು ? (ವಿವರ ನೀಡುವುದು)

## ಅಂತರ್ ಜಲ ಹೆಚ್ಚಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೬೩(೨೫೦೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ನಾಯಕನ ಹಟ್ಟಿ ಮತ್ತು ತಳಕು ಹೋಬಳಿಯ ಸುಮಾರು ೭೦ ಗ್ರಾಮಗಳಲ್ಲಿ ಅಂತರ್ ಜಲ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅಂತರ್ ಜಲ ಹೆಚ್ಚಿಸಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ ; ಈ ಯೋಜನೆಗಳ ರೂಪುರೇಷೆಗಳೇನು ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಜಾರಿಗೊಳಿಸಲಾಗುವುದು ?

## ತುಂಗಾ ಮೇಲ್ದಂಡೆ ಯೋಜನೆಯ ಪ್ರಗತಿ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೬೪(೨೫೮೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಶಿರಿಗೆರೆ, ಭೀಮಸಮುದ್ರ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು ಒದಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ, ಈ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ? (ವಿವರ ನೀಡುವುದು)

## ನೀರಾವರಿ ಯೋಜನೆಗಳ ಅನುಷ್ಠಾನ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೬೫(೨೫೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ನೀಡಿರುವ ಅನುದಾನವೆಷ್ಟು ; ಈ ಅನುದಾನದಿಂದ 'ಬೀದರ್' ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ;

(ಆ) ಬೀದರ್ ಜಿಲ್ಲೆಯ ಕಾರಂಜಿ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಯಾವ ಯಾವ ಕಾಮಗಾರಿಗಳು ಬಾಕಿ ಇವೆ ; ಪ್ರಸಕ್ತ ವರ್ಷದಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಖರ್ಚು ಮಾಡಲಾಗುವುದು ;

(ಇ) ಈ ಯೋಜನೆಯನ್ನು ಪ್ರಸಕ್ತ ವರ್ಷದಲ್ಲಿಯೇ ಪೂರ್ಣಗೊಳಿಸಲಾಗುವುದೇ ;

(ಈ) ಇಲ್ಲಿಯವರೆಗೆ ಈ ಯೋಜನೆಯ ಅನುಷ್ಠಾನಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ವಿವಿಧ ಯೋಜನೆಗಳಿಗೆ ಭೂಮಿ ಹಂಚಿಕೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೬೬(೨೫೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಯಾವ ಯಾವ ಯೋಜನೆಗಳಿಗಾಗಿ ಭೂಮಿ ಹಂಚಿಕೆ ಮಾಡಲಾಗಿದೆ ; (ಹಾಗಿದ್ದಲ್ಲಿ, ಯೋಜನೆವಾರು, ತಾಲ್ಲೂಕುವಾರು, ವಿಸ್ತೀರ್ಣವಾರು ಮಾಹಿತಿ ಒದಗಿಸುವುದು)

(ಆ) ಭೂಮಿ ಹಂಚಿಕೆ ಮಾಡಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಗಳ ಜವಾಬ್ದಾರಿಯನ್ನು ನಿರ್ವಹಿಸುವ ಅಧಿಕಾರಿಯ ಕಾರ್ಯವ್ಯಾಪ್ತಿಗಳೇನು ? (ಸಂಪೂರ್ಣ ವಿವರ ಒದಗಿಸುವುದು)

## ಗೋಮಾಳ ಭೂಮಿ ಒತ್ತುವರಿ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೬೭(೨೫೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಗೋಮಾಳ ಭೂಮಿ ಎಷ್ಟು; ಅವುಗಳ ವಿಸ್ತೀರ್ಣ ಎಷ್ಟು ; ಸರ್ವೆನಂಬರ್ ಸಹಿತ ಗ್ರಾಮವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಗೋಮಾಳ ಭೂಮಿಯು ಒತ್ತುವರಿಯಾಗಿರುವ ಪ್ರಕರಣಗಳೆಷ್ಟು; ಒತ್ತುವರಿಯಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು; (ಒತ್ತುವರಿದಾರರ ಹೆಸರಿನೊಂದಿಗೆ ಎಕರೆವಾರು ವಿವರ ನೀಡುವುದು)

(ಇ) ಗೋಮಾಳ ಜಮೀನಿನ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬೀದರ್ ಜಿಲ್ಲೆಗೆ ಹಂಚಿಕೆ ಮಾಡಲಾದ ಅನುದಾನ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೬೮(೨೫೧೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಂಚಿಕೆ ಮಾಡಲಾಗಿದ್ದ ಒಟ್ಟು ಅನುದಾನ ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಹಂಚಿಕೆ ಮಾಡಿದ್ದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಅವುಗಳ ಸ್ಥಿತಿಗತಿ ಏನು; (ಮಾಹಿತಿ ನೀಡುವುದು)

(ಇ) ಕಾಮಗಾರಿಗಳಿಗೆ ತಗುಲಿದ ವೆಚ್ಚ ಎಷ್ಟು; ಆ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ? (ವಿಧಾನಸಭಾ ಕ್ಷೇತ್ರವಾರು, ವರ್ಷವಾರು, ಕಾಮಗಾರಿವಾರು ವೆಚ್ಚದ ವಿವರ ಒದಗಿಸುವುದು)

## ಮೀನುಗಾರಿಕೆ ಯೋಜನೆಗಳು

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೬೯(೨೫೧೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ;

(ಆ) ಈ ಯೋಜನೆಗಳ ಕುರಿತು ಜಾಗೃತಿ ಮೂಡಿಸಲು ರೈತರಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ನೀಡಲಾಗಿದೆಯೇ ; ಇಂತಹ ಕಾರ್ಯಕ್ರಮಗಳನ್ನು ಎಲ್ಲೆಲ್ಲಿ ಹಮ್ಮಿಕೊಳ್ಳಲಾಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ? (ವರ್ಷವಾರು ವಿವರ ನೀಡುವುದು)

## ಬರಪೀಡಿತ ತಾಲ್ಲೂಕುಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೨೦೭೦(೨೫೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು "ಬರ ಪೀಡಿತ ತಾಲ್ಲೂಕುಗಳು" ಎಂದು ಘೋಷಿಸಲಾಗಿದೆ ; ಆ ತಾಲ್ಲೂಕುಗಳು ಯಾವುವು ;

(ಆ) ಬರ ಪೀಡಿತ ತಾಲ್ಲೂಕುಗಳಿಂದ ಆಗಿರುವ ನಷ್ಟವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ನಷ್ಟ ಪರಿಹಾರ ನೀಡಲು ಮತ್ತು ಬರ ಪರಿಹಾರ ಕಾಮಗಾರಿ ರೂಪಿಸಲು ಅನುಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡಿರುವ ಅನುದಾನವೆಷ್ಟು ;

(ಈ) ಆ ಅನುದಾನದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಗೋಶಾಲೆ ಕುಡಿಯುವ ನೀರಿನ ಪೂರೈಕೆ, ಉದ್ಯೋಗ ಸೃಷ್ಟಿ ಮುಂತಾದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ; ಇದಕ್ಕೆ ವಿನಿಯೋಗಿಸಲಾಗಿರುವ ಹಣ ಎಷ್ಟು ? (ವಿವರ ನೀಡುವುದು)

## ಪರಿಸರ ಸಮತೋಲನ ಮತ್ತು ಅರಣ್ಯ ಪ್ರದೇಶ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೨೦೭೧ (೨೫೬೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟಾರೆ ಇರುವ ಅರಣ್ಯ ಪ್ರದೇಶವೆಷ್ಟು ; ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಅರಣ್ಯ ಪ್ರದೇಶವಿದೆ ; (ಪ್ರತಿ ತಾಲ್ಲೂಕುವಾರು ವಿವರ ನೀಡುವುದು)

(ಆ) ಪರಿಸರ ಸಮತೋಲನ ಕಾಪಾಡಲು ಅಗತ್ಯವಿರಬೇಕಾದ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ; ಹಾಲಿ ಇರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ;

(ಇ) ಈ ರೀತಿಯ ಅರಣ್ಯ ಕೊರತೆಯಿಂದ ಪರಿಸರದ ಮೇಲಾಗಿರುವ ದುಷ್ಪರಿಣಾಮಗಳಾವುವು ; ದುಷ್ಪರಿಣಾಮಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಈ) ಪರಿಸರ ಸಮತೋಲನ ಕಾಪಾಡಲು ರಾಷ್ಟ್ರೀಯ ಸರಾಸರಿಯಂತೆ ಶೇ: ೩೩ ರಷ್ಟು ಅರಣ್ಯವನ್ನು ರಾಜ್ಯದಲ್ಲೂ ವೃದ್ಧಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಉ) ರಾಜ್ಯದಲ್ಲಿ ಪ್ರತಿ ವರ್ಷ ಅರಣ್ಯ ಇಲಾಖೆಯಿಂದ ಮತ್ತು ಸಾರ್ವಜನಿಕರಿಂದ ನೆಡಲಾದ ಸಸಿಗಳ ಪ್ರಮಾಣ ಎಷ್ಟು; ಅವು ಯಾವ ಯಾವ ಜಾತಿಗೆ ಸೇರಿದವುಗಳಾಗಿವೆ ;

(ಊ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಸಸಿಗಳನ್ನು ನೆಡಲಾಗಿದೆ ; ಇನ್ನೂ ನೆಡಲು ಬಾಕಿ ಉಳಿದಿರುವಂತಹ ತಾಲ್ಲೂಕುಗಳು ಯಾವುವು ? (ಸಂಪೂರ್ಣ ವಿವರ ನೀಡುವುದು)

## ಕಂದಾಯ ಇಲಾಖೆಯಲ್ಲಿ R.T.C. ಪೋಡಿಗಳ ವಿಳಂಬ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೭೨(೨೫೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯಲ್ಲಿ ಆರ್‌ಟಿಸಿಗಳ ರಚನೆಯಲ್ಲಿ ವಿಳಂಬ ಪೋಡಿ ಬಾಕಿ ಹಾಗೂ ಖಾತಾ ಬದಲಾವಣೆ ಸೇರ್ಪಡೆಗಳು ಸಮರ್ಪಕವಾಗಿ ಜರುಗದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಪ್ರಕರಣಗಳ ಇತ್ಯರ್ಥಕ್ಕೆ ಕಂದಾಯ ಅದಾಲತ್‌ಗಳನ್ನು ಮಾಡಲು ಸರ್ಕಾರ ಮುಂದಾಗುವುದೇ ;

(ಇ) ಇದುವರೆಗೂ ಇತ್ಯರ್ಥಪಡಿಸದ ಪ್ರಕರಣಗಳು ಹಾಗೂ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು; ಬಾಕಿ ಪ್ರಕರಣಗಳನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲು ಸರ್ಕಾರ ಉದ್ದೇಶಿಸಿದೆ ;

(ಈ) ಕಂದಾಯ ಇಲಾಖೆಯ ಹಲವು ಸೇವೆಗಳನ್ನು ಸಕಾಲ ವ್ಯಾಪ್ತಿಗೆ ಸೇರಿಸಿದ್ದರೂ ಪರಿಣಾಮಕಾರಿ ಪ್ರಗತಿ ಕಾಣದಿರುವ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವುದು ;

(ಉ) ಈ ನಿಟ್ಟಿನಲ್ಲಿ ಸಮಗ್ರ ಮಾಹಿತಿಗಾಗಿ ಸರ್ಕಾರ ಶ್ವೇತಪತ್ರ ಹೊರಡಿಸಲು ಮುಂದಾಗುವುದೇ ? (ವಿವರ ನೀಡುವುದು)

## ಅತೀವೃಷ್ಠಿಯಿಂದ ಆದ ಹಾನಿಯ ಬಗ್ಗೆ ಸಮೀಕ್ಷೆ ಹಾಗೂ ಪರಿಹಾರ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೨೦೬೩ (೨೫೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ತಾಲ್ಲೂಕಿನಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್, ೨೦೧೪ ರಲ್ಲಿ ಅತೀವೃಷ್ಠಿಯಾಗಿ ಗಂಡೋರಿ ನಾಲಾ ಅಣೆಕಟ್ಟಿನಿಂದ ಹೆಚ್ಚಿನ ಪ್ರಮಾಣದ ನೀರು ಬಿಟ್ಟ ಪರಿಣಾಮ ಗಂಡೋರಿ ನಾಲಾದಲ್ಲಿ ಪ್ರವಾಹ ಉಂಟಾಗಿ ನೀರು ಹೊಲಗಳಿಗೆ ಹರಿದು ಫಲವತ್ತಾದ ೨ ರಿಂದ ೫ ಅಡಿ ಮಣ್ಣು ಕೊಚ್ಚಿ ಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ ;

(ಆ) ಇದ್ದಲ್ಲಿ, ಈ ನಿಟ್ಟಿನಲ್ಲಿ ರೈತರ ಹೊಲಗಳಿಗೆ ಆದ ಹಾನಿ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ; (ರೈತರ ಹೆಸರು, ಸರ್ವೆ ನಂ. ಹಾಗೂ ಎಕರೆಸಹಿತ ವಿವರ ನೀಡುವುದು)

(ಇ) ಈ ನಿಟ್ಟಿನಲ್ಲಿ ಸರಿಯಾದ ಸಮೀಕ್ಷೆ ಮಾಡಿರದಿದ್ದರೆ, ಸರ್ಕಾರ ಸಮೀಕ್ಷೆ ಕೈಗೊಂಡು ತಮ್ಮ ಹೊಲಗಳ ಫಲವತ್ತಾದ ಮಣ್ಣು ಕೊಚ್ಚಿಹೋಗಿ ಕಂಗಾಲಾದ ರೈತರ ನೆರವಿಗೆ ಬಂದು, ಆದ ಹಾನಿಗೆ ಪರಿಹಾರ ಅಥವಾ ಹೊಲಗಳಿಗೆ ಮಣ್ಣು ತುಂಬಲು ಮುಂದಾಗುವುದೇ ;

(ಈ) ಈ ರೀತಿಯ ಪ್ರವಾಹದಿಂದ ಆಗುವ ಅನಾಹುತಗಳನ್ನು ತಡೆಯಲು ಮುಂಬರುವ ದಿನಗಳಲ್ಲಿ ಇಲಾಖೆ ಕೈಗೊಳ್ಳುವ ಕ್ರಮಗಳೇನು ?

## ಮುಳುಗಡೆಯಾಗಿರುವ ಗ್ರಾಮಗಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೨೦೭೪ (೨೫೨೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ ಯೋಜನೆಯ ಅಡಿಯಲ್ಲಿ ಮುಳುಗಡೆಯಾಗಿರುವ ಗ್ರಾಮಗಳು ಎಷ್ಟು; (ಗ್ರಾಮವಾರು, ಕುಟುಂಬವಾರು, ಮನೆಗಳ ಮತ್ತು ಧಾರ್ಮಿಕ ಸ್ಥಳಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಳುಗಡೆಯಾದ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸಲಾಗಿದೆಯೇ ; ಗ್ರಾಮವಾರು, ನಿವೇಶನ ಹಂಚಿಕೆ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ ; (ಪ್ರತ್ಯೇಕವಾಗಿ ಗ್ರಾಮವಾರು ಪುನರ್ ವಸತಿ ಕೇಂದ್ರಗಳ ವಿವರವಾದ ಮಾಹಿತಿ ನೀಡುವುದು)

(ಇ) ಇನ್ನೂ ಹಲವಾರು ಗ್ರಾಮಗಳ ಸಂತ್ರಸ್ಥರಿಗೆ ಪುನರ್ ವಸತಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಕ್ಕುಪತ್ರ ವಿತರಣೆಯಾಗಿ ನಿವೇಶನ ದೊರಕದೆ ಇರುವುದು ಹಾಗೂ ಸರಿಯಾದ ಸಮೀಕ್ಷೆ ಆಗದೆ ಮನೆಗಳು ಕೈಬಿಟ್ಟಿರುವ ಪ್ರಕರಣಗಳ ಸಂಖ್ಯೆ ಎಷ್ಟು;

(ಉ) ಹೆಚ್ಚುವರಿ ಸಂತ್ರಸ್ಥರ ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ಮುಂದಾಗುವುದೇ ? (ಮಾಹಿತಿ ನೀಡುವುದು)

## "ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ"ಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೦೭೫ (೨೬೧೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅಸಂಘಟಿತ ವಲಯದ ಕಾರ್ಮಿಕ ಕುಟುಂಬಗಳಿಗಾಗಿ ಉಚಿತ ಆರೋಗ್ಯ ಸೌಲಭ್ಯ ಒದಗಿಸಲು ರೂಪಿಸಲಾಗಿರುವ "ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ" ಕುಂಠಿತಗೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಇದುವರೆಗೂ ಈ ಯೋಜನೆಯಡಿ ಸೌಲಭ್ಯವನ್ನು ಪಡೆದ ಕುಟುಂಬಗಳ ಸಂಖ್ಯೆ ಎಷ್ಟು; ಹೊಸದಾಗಿ ನೋಂದಣಿ ಮಾಡಿಸುವ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಹೊಸ ಕಾರ್ಡ್ ನೀಡಲು ಮುಂದಾಗುವುದೇ ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ೨೦೧೪-೧೫ ಮತ್ತು ೨೦೧೫-೧೬ನೇ ಸಾಲಿನಲ್ಲಿ ಹೈದ್ರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ "ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ" ಯಡಿಯಲ್ಲಿ ವಿತರಿಸಲಾಗಿರುವ ಕಾರ್ಡ್‌ಗಳ ಸಂಖ್ಯೆ ಎಷ್ಟು; ಬಾಕಿ ಇರುವ ಪ್ರಕರಣಗಳೆಷ್ಟು ;

(ಈ) ಈ ಸದರಿ ಯೋಜನೆಯನ್ನು ಕಾರ್ಯರೂಪಕ್ಕೆ ಮತ್ತು ಅನುಷ್ಠಾನಕ್ಕೆ ತರಲು ಸರ್ಕಾರ ಯಾವ ಸಮಿತಿ ರಚಿಸಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕು, ತೆಲ್ಕೂರ ಮತ್ತು ಅಬಾಳ್ (ಟಿ) ಗ್ರಾಮಗಳಲ್ಲಿ ನಿರುಪಯುಕ್ತ ತ್ಯಾಜ್ಯದಿಂದಾದ ವಿಷಾನಿಲದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೨೦೭೬ (೨೬೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕಿನ ತೆಲ್ಕೂರ ಮತ್ತು ಅಬಾಳ್ (ಟಿ) ಗ್ರಾಮಗಳ ವ್ಯಾಪ್ತಿಯಲ್ಲಿ ವಿಷಾನಿಲದಿಂದ ಕೂಡಿದಂತಹ ರಾಸಾಯನಿಕ ಯುಕ್ತ ನಿರುಪಯುಕ್ತ ತ್ಯಾಜ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ವಿಲೇವಾರಿ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಎರಡು ಗ್ರಾಮಗಳಲ್ಲಿ ವಿಷಪೂರಿತ ಕೆಮಿಕಲ್ಸ್ ತುಂಬ ಅಪಾಯಕಾರಿಯಾಗಿರುವುದರಿಂದ ವಾಯು ಮಾಲಿನ್ಯ ಹದಗೆಟ್ಟಿದ್ದು,ಈ ಪ್ರದೇಶದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಕಣ್ಣುರಿ, ವಾಂತಿ, ಭೇದಿಯಂತಹ ಪ್ರಕರಣಗಳು ಬೆಳಕಿಗೆ ಬಂದಿರುವ ಪ್ರಕರಣಗಳು ಸರ್ಕಾರದ

ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಕರ್ತರಾದ ಖಾಸಗಿ ಸಿಮೆಂಟ್ ಕಂಪನಿ ಹಾಗೂ ಪ್ರಭಾವಿ ವ್ಯಕ್ತಿಗಳ ವಿರುದ್ಧ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ; (ಮಾಹಿತಿ ನೀಡುವುದು)

(ಇ) ಸದರಿ ಗ್ರಾಮಗಳಲ್ಲಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ ಜನರು ಆಸ್ಪತ್ರೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ಬೆಳಕಿಗೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ;

(ಈ) ಈ ತ್ಯಾಜ್ಯದಿಂದ ಈ ಎರಡು ಗ್ರಾಮಗಳು "ಒಂದು ಮಿನಿ ಭೂಪಾಲ್ ಗ್ಯಾಸ್" ನಂತಹ ದುರಂತವಾಗಿರುವುದು ಹಾಗೂ ಈ ತ್ಯಾಜ್ಯವನ್ನು ಬೇರೆ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರಕ್ಕೆ ಸುಮಾರು ಅಂದಾಜು ಮೊತ್ತ ಎಷ್ಟಾಗಬಹುದು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ವರಾಹಿ ನೀರಾವರಿ ಯೋಜನೆಯಲ್ಲಿ ಕಳೆದ ಒಂದು ವರ್ಷಗಳಿಂದ ಕರೆಯಲಾದ ಕಾಲುವೆ ಕಾಮಗಾರಿಗಳ ಟೆಂಡರ್ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೭೭ (೨೫೨೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವರಾಹಿ ನೀರಾವರಿ ಯೋಜನೆಯಲ್ಲಿ ಕಳೆದ ಒಂದು ವರ್ಷಗಳಿಂದ ಕಾಲುವೆಗಳ ಹೂಳೆತ್ತುವ ಮತ್ತು S.C.P. ಮತ್ತು T.S.P. ಯ ಕಾಮಗಾರಿಗಳನ್ನು ಹೊರತುಪಡಿಸಿ ಎಷ್ಟು ಕಿ.ಮೀ. ನೀರಾವರಿ ಕಾಲುವೆಗಳ ಕಾಮಗಾರಿಯ ಗುತ್ತಿಗೆಯ ಟೆಂಡರ್‌ನ್ನು ಕರೆಯಲಾಗಿದೆ ; ಇಲ್ಲದಿದ್ದಲ್ಲಿ, ಇಲ್ಲಿಯವರೆಗೆ ಟೆಂಡರ್‌ನ್ನು ಕರೆಯದಿರಲು ಕಾರಣವೇನು ;

(ಆ) ವರಾಹಿ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಯ ಕಾಮಗಾರಿಗಳನ್ನು ಅಂದಾಜಿನಂತೆ ಯಾವಾಗ ಪೂರ್ಣಗೊಳಿಸಲಾಗುವುದು ;

(ಇ) ರೈತರ ಹೊಲಗಳಿಗೆ ನೀರುಣಿಸುವ ಸಲುವಾಗಿ ಪ್ರಾರಂಭಿಸಲಾದ ವರಾಹಿ ನೀರಾವರಿ ಯೋಜನೆಯು ಖಾಸಗಿ ವಿದ್ಯುತ್ ಉತ್ಪಾದಕರ ನಿಯಂತ್ರಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ತನಕ ರೈತರ ಎರಡನೇ ಬೆಳೆಗೆ ಪೂರಕವಾಗಿ ನೀರನ್ನು ರೈತರ ಹೊಲಗಳಿಗೆ ಹರಿಸದಿರಲು ಕಾರಣವೇನು ?

## ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ವೆಚ್ಚ ಮಾಡಲಾದ ಮೊತ್ತ ಹಾಗೂ ಭೂ ಸ್ವಾಧೀನ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೭೮ (೨೫೨೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ವೆಚ್ಚ ಮಾಡಲಾದ ಒಟ್ಟು ಮೊತ್ತವೆಷ್ಟು ; (ವರ್ಷವಾರು, ಗುತ್ತಿಗೆದಾರರವಾರು ವಿವರ ನೀಡುವುದು)

(ಆ) ಈ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸ್ವಾಧೀನ ಪಡಿಸಿಕೊಳ್ಳಲಾದ ಕಂದಾಯ, ಅರಣ್ಯ ಮತ್ತು ಖಾಸಗಿ ಭೂಮಿಗಳ ಒಟ್ಟು ವಿಸ್ತೀರ್ಣವೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಇ) ಈ ಯೋಜನೆಯ ಅನುಷ್ಠಾನದ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿರುವಂತಹ ಪ್ರಕರಣಗಳೆಷ್ಟು ? (ಪ್ರಕರಣವಾರು ವಿವರ ನೀಡುವುದು)

# ರಾಜ್ಯದಲ್ಲಿ ಈಗಾಗಲೇ ನಿರ್ಮಿಸಲಾದ ಹಾಗೂ ನಿರ್ಮಿಸಲಾಗುತ್ತಿರುವ ನೀರಾವರಿ ಯೋಜನೆಗಳಿಂದ ವಿದ್ಯುತ್ ಉತ್ಪಾದನಾ ಘಟಕಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೭೯ (೨೫೨೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:

(ಅ) ರಾಜ್ಯದಲ್ಲಿ ಈಗಾಗಲೇ ನಿರ್ಮಿಸಿರುವ ಮತ್ತು ನಿರ್ಮಿಸಲಾಗುತ್ತಿರುವ ಬೃಹತ್ ನೀರಾವರಿ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶ ಕಲ್ಪಿಸಿದ ಯೋಜನೆಗಳು ಯಾವುವು ; ಅವು ಉತ್ಪಾದಿಸುವ ವಿದ್ಯುತ್ತಿನ ಪ್ರಮಾಣ ಮತ್ತು ಶಕ್ತಿ ಎಷ್ಟು; (ಯೋಜನಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಈಗಾಗಲೇ ನಿರ್ಮಿಸಿರುವ ಮತ್ತು ನಿರ್ಮಿಸಲಾಗುತ್ತಿರುವ ಬೃಹತ್ ನೀರಾವರಿ ಯೋಜನೆಯಲ್ಲಿ ರೈತರ ಹೊಲಗಳಿಗೆ ನೀರುಣಿಸುವ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಘಟಕಗಳು ಯಾವುವು ; (ಜಿಲ್ಲಾವಾರು, ಘಟಕವಾರು, ಯೋಜನಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಈಗಾಗಲೇ ನಿರ್ಮಿಸಿರುವ ಮತ್ತು ನಿರ್ಮಿಸಲಾಗುತ್ತಿರುವ ಬೃಹತ್ ನೀರಾವರಿ ಯೋಜನೆಗಳಲ್ಲಿ ರೈತರಿಂದ ನೀರಿನ ಬೇಡಿಕೆ ಇಲ್ಲದ ಸಮಯದಲ್ಲಿ ಹಾಗೂ ಮಳೆಗಾಲದಲ್ಲಿ ವಿದ್ಯುತ್ ಉತ್ಪಾದಿಸುವ ಘಟಕಗಳು ಯಾವುವು ; (ಜಿಲ್ಲಾವಾರು, ಘಟಕವಾರು ವಿವರ ನೀಡುವುದು)

(ಈ) ನೀರಾವರಿ ಯೋಜನೆಗಳಲ್ಲಿ ಖಾಸಗಿ ವಿದ್ಯುತ್ ಉತ್ಪಾದನೆಗೆ ಅವಕಾಶ ಕಲ್ಪಿಸಿರುವುದರಿಂದ ರೈತರು ಮತ್ತು ಖಾಸಗಿ ವಿದ್ಯುತ್ ಉತ್ಪಾದಕರ ನಡುವಿನ ಸಂಘರ್ಷವನ್ನು ತಪ್ಪಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ; ಇಲ್ಲವಾದಲ್ಲಿ, ಅದು ರೈತ ವಿರೋಧಿ ನೀತಿಯಾಗುವುದಿಲ್ಲವೇ ?

## ಉಡುಪಿ ಜಿಲ್ಲೆಯಲ್ಲಿ ಅರ್ಜಿ ನಮೂನೆ –7,7A, 50,53,94 ಸಿ ರಡಿ ಸಲ್ಲಿಸಲಾದ ಅರ್ಜಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೦ (೨೫೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಭೂ ಸುಧಾರಣಾ ಕಾಯಿದೆಯಡಿ ಅರ್ಜಿ ನಮೂನೆ–೭ರಡಿ ಅರ್ಜಿ ಸಲ್ಲಿಸಲಾದ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಇತ್ಯರ್ಥಪಡಿಸಲಾದ ಹಾಗೂ ಇತ್ಯರ್ಥಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಕೋರಿದ ಅರ್ಜಿಗಳಲ್ಲಿ ಪುನರ್ ಪರಿಶೀಲನೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಭೂ ಸುಧಾರಣಾ ಕಾಯಿದೆಯಡಿ ಅರ್ಜಿ ನಮೂನೆ –7A ರಡಿ ಅರ್ಜಿ ಸಲ್ಲಿಸಲಾದ ಒಟ್ಟು ಪ್ರಕರಣಗಳೆಷ್ಟು ; ಆ ಪೈಕಿ ಇತ್ಯರ್ಥಪಡಿಸಲಾದ ಮತ್ತು ಇತ್ಯರ್ಥಪಡಿಸಲು ಬಾಕಿ ಇರುವ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಭೂ ಮಂಜೂರಾತಿ ಕೋರಿ ಅರ್ಜಿ ನಮೂನೆ ೫೦ ಮತ್ತು ೫೩ ರಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಇತ್ಯರ್ಥಪಡಿಸಲಾದ ಹಾಗೂ ಇತ್ಯರ್ಥಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಭೂ ಮಂಜೂರಾತಿ ಕೋರಿ ಅರ್ಜಿ ನಮೂನೆ–೯೪ ಸಿ ರಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಮತ್ತು ಇವುಗಳಲ್ಲಿ ಇತ್ಯರ್ಥಪಡಿಸಲಾದ ಹಾಗೂ ಇತ್ಯರ್ಥಪಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ೯೪ ಸಿ ರಡಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಈ ಎಲ್ಲಾ ಅರ್ಜಿಗಳನ್ನು ಇತ್ಯರ್ಥ ಪಡಿಸಲು ಕಾಲಮಿತಿ ನಿಗಧಿಪಡಿಸಲಾಗುವುದೇ ಇಲ್ಲವಾದಲ್ಲಿ ಪರಿಹಾರವೇನು ?

## ಕಸ್ತೂರಿರಂಗನ್ ವರದಿಯ ಮೇಲೆ ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೧ (೨೫೨೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಕಸ್ತೂರಿರಂಗನ್ ವರದಿಯ ಮೇಲೆ ತೆಗೆದುಕೊಂಡ ಕ್ರಮಗಳೇನು ; ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ನೀಡಿದ ಸಲಹೆ ಹಾಗೂ ಆಕ್ಷೇಪಗಳು ಯಾವುವು ;

(ಆ) ಈ ವರದಿಯಲ್ಲಿ ಹೆಸರಿಸಲಾದ ಗ್ರಾಮಗಳು ವಾಸ್ತವ್ಯದ ಹಾಗೂ ಸರ್ವೇ ಮುಖಾಂತರ ದಾಖಲಿಸದ ಕಾಡುಗಳಾಗಿರದೆ ಇರುವುದು ನಿಜವೇ ; ಈ ಪ್ರಯೋಗವು ಮುಗ್ಧ ರೈತರ ಬದುಕಿನ ಮೇಲೆ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

(ಇ) ಭೂ ಮಂಜೂರಾತಿಗಾಗಿ ಅರ್ಜಿ ನಮೂನೆ ೫೦ ಮತ್ತು ೫೩ ರಲ್ಲಿ ಅರ್ಜಿ ಸಲ್ಲಿಸಿದ ಪ್ರಕರಣಗಳು ಎಷ್ಟು ; ರೈತರ ಇಂದಿನ ಮತ್ತು ಮುಂದಿನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ರಾಜ್ಯ ಸರ್ಕಾರ ರಕ್ಷಣೆ ನೀಡುವುದೇ ; ಇಲ್ಲವಾದಲ್ಲಿ ಸರ್ಕಾರ ನೀಡುವ ಸಲಹೆಗಳೇನು ;

(ಈ) ಉಡುಪಿ ಜಿಲ್ಲೆಯಲ್ಲಿ ಉದ್ದೇಶಿತ ಪರಿಸರ ಸೂಕ್ಷ್ಮ ವಲಯಗಳೆಂದು ಘೋಷಿಸಲ್ಪಟ್ಟ ಗ್ರಾಮಗಳು ಯಾವುವು ; ಮತ್ತು ಈ ಗ್ರಾಮಗಳ ವಿಸ್ತೀರ್ಣವೆಷ್ಟು ? (ಗ್ರಾಮವಾರು ವಿವರ ನೀಡುವುದು)

## ಪೌತಿ ಖಾತೆ ವರ್ಗಾವಣೆ ಪದ್ಧತಿಯಲ್ಲಿ ಬದಲಾವಣೆ ತರುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೮೨ (೨೫೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೌತಿ ಖಾತೆ ವರ್ಗಾವಣೆ ಹಿನ್ನೆಲೆಯಲ್ಲಿ ಸದ್ಯ ಪಾಲನೆಯಲ್ಲಿರುವ ನಿಯಮಾವಳಿಯ ರೀತ್ಯಾ ಕುಟುಂಬದ ಮುಖ್ಯಸ್ಥನಾದ ತಂದೆಯ

ಕಾಲಾನಂತರ ಮನೆಯ ಹಿರಿಯ ಮಗನ ಹೆಸರಿಗೆ ಪೌತಿ ಖಾತೆ ವರ್ಗಾವಣೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ; ಮನೆಯ ಹಿರಿಯ ಮಗನ ಹೆಸರಿನಲ್ಲಿ ಸಹಜವಾಗಿ ಈ ರೀತಿ ಖಾತೆ ವರ್ಗಾವಣೆಯಾಗುವುದರಿಂದ ಕುಟುಂಬದ ಇತರೆ ವಾರಸುದಾರ ಸದಸ್ಯರುಗಳಿಗೆ ಸಕಾಲದಲ್ಲಿ ಅವರ ಪಾಲಿಗೆ ಬರಬೇಕಾದ ಭೂಮಿಯ ಹಂಚಿಕೆಯಂತೆ ಖಾತೆ ವರ್ಗಾವಣೆಯಾಗದೆ ಅನಾನುಕೂಲತೆಗಳು ಉಂಟಾಗುವ ಹಿನ್ನೆಲೆಯಲ್ಲಿ ಕುಟುಂಬಗಳಲ್ಲಿ ಅನಗತ್ಯ ವೈಮನಸ್ಯಗಳು ಹೆಚ್ಚಾಗುತ್ತಿದ್ದು, ಈ ರೀತಿಯ ಸಮಸ್ಯೆಗಳಿಗೆ ಪರಿಹಾರದ ಮಾರ್ಗೋಪಾಯಗಳೇನು ;

(ಆ) ಪೌತಿ ಖಾತೆ ಅನ್ವಯ ಖಾತೆ ವರ್ಗಾವಣೆ ಮಾಡುವ ಸಂದರ್ಭಗಳಲ್ಲಿ ಕುಟುಂಬದ ಎಲ್ಲಾ ವಾರಸುದಾರ ಸದಸ್ಯರ (ವಂಶವೃಕ್ಷದ ಆಧಾರದ ಮೇಲೆ) ಹೆಸರನ್ನು ಪಹಣಿಯಲ್ಲಿ ಕಾಣಿಸಲು ಕಂದಾಯ ಇಲಾಖೆಗೆ ಇರುವ ಕಾನೂನಾತ್ಮಕ ತೊಡಕುಗಳೇನು ;

(ಇ) ಈಗಿರುವ ಪದ್ಧತಿಯಿಂದ ಅನಗತ್ಯವಾಗಿ ಹೆಚ್ಚಾಗುತ್ತಿರುವ ಕೌಟುಂಬಿಕ ವ್ಯಾಜ್ಯಗಳನ್ನು ಪ್ರಾಥಮಿಕ ಹಂತದಲ್ಲೇ ತಡೆಯಲು ಸದ್ಯದಲ್ಲಿ ಜಾರಿಯಲ್ಲಿರುವ ಮೇಲ್ಕಾಣಿಸಿದ ಪದ್ಧತಿಗಳನ್ನು ಬದಲಾಯಿಸಲು ಸಾಧ್ಯವಿಲ್ಲವೇ ? (ಸಾಧ್ಯವಿದ್ದಲ್ಲಿ ವಿವರಗಳನ್ನು ಒದಗಿಸುವುದು)

# ದೃಢೀಕೃತ ಬೀಜಗಳನ್ನು ಬಳಸಿ ಸಸ್ಯ ಕ್ಷೇತ್ರಗಳನ್ನು ಮಾಡುತ್ತಿರುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೮೩ (೨೫೩೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಸಸ್ಯ ಕ್ಷೇತ್ರಗಳ ಬಳಕೆಗೆ ಹಾಗೂ ಸಾರ್ವಜನಿಕ ಉಪಯೋಗಕ್ಕೆ ದೃಢೀಕೃತ ಬೀಜಗಳ (ವಂಶೀಯ ಎಂದು ಗುರುತಿಸಲಾದ) ಬಳಕೆ ಕಡ್ಡಾಯವಾಗಿ ಚಾಲ್ತಿಯಲ್ಲಿದ್ದು, ಇದೇ ರೀತಿಯ ವ್ಯವಸ್ಥೆ ಅರಣ್ಯ ಇಲಾಖೆಯ ಸಸ್ಯ ಕ್ಷೇತ್ರಗಳ ಬಳಕೆಗೆ ಹಾಗೂ ಸಾರ್ವಜನಿಕ ಉಪಯೋಗಕ್ಕಾಗಿ ವಿವಿಧ ಜಾತಿಯ ಮರಗಳ ಹಂಚಿಕೆಯಲ್ಲಿ ಯಥಾರೀತಿಯ ಪದ್ಧತಿಯನ್ನು ಅನುಸರಿಸಲು ಅರಣ್ಯ ಇಲಾಖೆಗೆ ಸಾಧ್ಯವಾಗದಿರಲು ಕಾರಣವೇನು ;

(ಆ) ಗುರುತಿಸಲಾದ ಮರಗಳಿಂದ ಮಾತ್ರ ಬೀಜಗಳನ್ನು ಸಂಗ್ರಹಿಸಿ ಗುಣಮಟ್ಟದ ಹಾಗೂ ದೃಢೀಕೃತ ಬೀಜಗಳನ್ನು ಸಂಗ್ರಹಿಸಿ ಇಲಾಖಾ ವತಿಯಿಂದ ಪ್ರಮಾಣೀಕರಿಸಿ ಸದರಿ ಬೀಜಗಳನ್ನು ಮಾತ್ರ ಅರಣ್ಯ ಸಸ್ಯ ಕ್ಷೇತ್ರಗಳ ಬೆಳವಣಿಗೆ ಹಾಗೂ ಸಾರ್ವಜನಿಕ ಉಪಯೋಗಕ್ಕೆ ಬಳಕೆ ಮಾಡಲು ಈ ರೀತಿಯ ವ್ಯವಸ್ಥಿತವಾದ ಪದ್ಧತಿಯನ್ನು ಅನುಸರಿಸಲು ಅವಶ್ಯವಿರುವ ಕ್ರಮಗಳನ್ನು ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಲು ಗಮನಹರಿಸಲಾಗುವುದೇ ;

(ಇ) ಮುಂದಿನ ದಿನಗಳಲ್ಲಿ ಈ ರೀತಿಯ ಧನಾತ್ಮಕ ಗುಣಮಟ್ಟವುಳ್ಳ ಬೀಜಗಳನ್ನು ಮಾತ್ರ ಬಳಸಿ ಅವುಗಳನ್ನು ಸಸಿಗಳನ್ನಾಗಿ ಬೆಳೆಸಲು ಹಾಗೂ ಬಳಕೆ ಮಾಡಲು ಇಲಾಖೆ ಕೈಗೊಳ್ಳಲಿರುವ ಕ್ರಮಗಳ ವಿವರವನ್ನು ತಿಳಿಸುವುದು ?

# ನೆಡುತೋಪುಗಳಲ್ಲಿ ಬಳಸುತ್ತಿರುವ ಪದ್ಧತಿಗಳಲ್ಲಿ ಬದಲಾವಣೆ ತರುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೦೮೪ (೨೫೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯು ನೆಡುತೋಪುಗಳಲ್ಲಿ ಸದ್ಯದಲ್ಲಿ ಬಳಸಲಾಗುತ್ತಿರುವ ಹಾಗೂ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿಯಲ್ಲಿ ರೈತರಿಗೆ ವಿತರಿಸಲಾಗುವ ಒಟ್ಟಾರೆ ಇಲಾಖೆ ವತಿಯಿಂದ ಬಳಸಲ್ಪಡುತ್ತಿರುವ ಸಸಿಗಳನ್ನು ಸದ್ಯದಲ್ಲಿ ೪" X ೬" ಹಾಗೂ ೫" X ೮" ಅಳತೆಯ ಚೀಲಗಳಲ್ಲಿ ಬೆಳೆಸುವ ಪದ್ಧತಿ ಜಾರಿಯಲ್ಲಿದ್ದು, ಈ ಸಸಿಗಳನ್ನು ೩ ತಿಂಗಳಿನಿಂದ ೬ ತಿಂಗಳ ಅವಧಿಗೆ ಮಾತ್ರ ಬೆಳೆಸಿ ಬಳಸುವ ಪದ್ಧತಿ ಜಾರಿಯಲ್ಲಿದೆ. ಇದರ ಬದಲಾಗಿ ೧೦"X೧೬" ಅಳತೆಯ ಚೀಲಗಳಲ್ಲಿ ಬೆಳೆಸಿದ ಹಾಗೂ ಕನಿಷ್ಠ ಒಂದೂವರೆ ವರ್ಷದಿಂದ ೨ ವರ್ಷ ವಯಸ್ಸಿನ ೫ ರಿಂದ ೮ ಅಡಿ ಎತ್ತರದ ಸಸಿಗಳನ್ನು ಉಪಯೋಗಿಸುವ ಪದ್ಧತಿ ಅಳವಡಿಸಿಕೊಳ್ಳಲು ಇಲಾಖೆಗಿರುವ ಸಮಸ್ಯೆಗಳೇನು ;

(ಆ) ಸದ್ಯದ ನಿಯಮಾವಳಿಗಳಲ್ಲಿ ಈ ರೀತಿಯ ಬದಲಾವಣೆಗಳನ್ನು ಸಸ್ಯಪಾಲನಾ (ನರ್ಸರಿ) ಕ್ಷೇತ್ರಗಳಲ್ಲಿ ಮಾಡಿಕೊಳ್ಳುವುದರಿಂದ ಹೆಚ್ಚು ಗುಣಮಟ್ಟದ ಸಸಿಗಳನ್ನು ಇಲಾಖೆಯಿಂದ ವಿತರಿಸಲು ಸಾಧ್ಯವಾಗುವುದಲ್ಲದೆ ಸದರಿ ಸಸಿಗಳನ್ನು ನೆಟ್ಟು ಬೆಳೆಸಲು ಕಡಿಮೆ ಶ್ರಮ ಹಾಗೂ ನಂತರ ಪಾಲನೆಯ ವೆಚ್ಚವು ಕಡಿಮೆಯಾಗುತ್ತದೆ ಎಂದು ಇಲಾಖೆ ಒಪ್ಪುತ್ತದೆಯೇ ;

(ಇ) ಈ ರೀತಿಯ ಕ್ರಮಗಳಲ್ಲಿನ ಬದಲಾವಣೆಗಳಿಂದ ಬಳಸಲ್ಪಡುವ ಹಾಗೂ ನೆಟ್ಟ ಸಸಿಗಳು ನಶಿಸಿಹೋಗುವ ಸಂಖ್ಯೆ ಕಡಿಮೆಯಾಗುವುದಲ್ಲದೆ ಹಲವು ರೀತಿಯು ಗುಣಾತ್ಮಕ ಬದಲಾವಣೆಗಳನ್ನು ಕಾಣಲು ಸಾಧ್ಯವೆಂಬ ವಿಷಯವನ್ನು ಗಮನದಲ್ಲಿರಿಸಿಕೊಂಡು ಮುಂದಿನ ದಿನಗಳಲ್ಲಿ ಪಾಲಿಸಲು ಇಲಾಖೆ ಸಿದ್ಧವಿದೆಯೇ ? (ಅಗತ್ಯ ಮಾಹಿತಿಯನ್ನು ಒದಗಿಸುವುದು)

## ಕರ್ನಾಟಕ ಮೂಲ ಗೇಣಿ ಮತ್ತು ಒಳ ಮೂಲಗೇಣಿ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೫ (೨೫೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಮೂಲ ಗೇಣಿ ಮತ್ತು ಒಳ ಮೂಲಗೇಣಿದಾರರಿಗೆ ಮಾಲಿಕತ್ವ ವಹಿಸುವ ವಿಧೇಯಕ ೨೦೧೧ನ್ನು ರಾಷ್ಟ್ರಪತಿಯವರು ಅಂಗೀಕರಿಸಿದ್ದಾರೆಯೇ ;

(ಆ) ಅಂಗೀಕರಿಸಿದ್ದಲ್ಲಿ ರಾಜ್ಯ ಪತ್ರದಲ್ಲಿ ಯಾವಾಗ ಪ್ರಕಟಿಸಲಾಗಿದೆ ; (ಪ್ರತಿ ಒದಗಿಸುವುದು)

(ಇ) ರಾಷ್ಟ್ರಪತಿಯವರು ವಿಧೇಯಕವನ್ನು ಅಂಗೀಕರಿಸಿದ ನಂತರವೂ ಕಾಯಿದೆಯುಲ್ಲಿನ ಅಂಶಗಳನ್ನು ಅನುಷ್ಠಾನ ಮಾಡಲು ಸರ್ಕಾರಕ್ಕಿರುವ ತೊಡಕುಗಳೇನು ;

(ಈ) ಸರ್ಕಾರ ಯಾವಾಗ ಮೂಲಗೇಣಿ ಮತ್ತು ಒಳ ಮೂಲಗೇಣಿದಾರರಿಗೆ ಮಾಲಿಕತ್ವ ಪ್ರಭಾರ ಮಾಡುವ ವಿಧೇಯಕ ೨೦೧೧ರ ಅಂಶಗಳನ್ನು ಅನುಷ್ಠಾನಕ್ಕೆ ತರಲಿದೆ ? (ಸಂಪೂರ್ಣ ವಿವರ ನೀಡುವುದು)

## ೯೪–ಸಿ ಅರ್ಜಿ ವಿಲೇವಾರಿ ಮತ್ತು ನಿವೇಶನ ಹಂಚಿಕೆಯಲ್ಲಿ ವಿಳಂಬ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೬ (೨೫೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೯೪–ಸಿ ಯೋಜನೆಯಡಿ ಇಲ್ಲಿಯವರೆಗೆ ಸ್ವೀಕೃತವಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)

(ಆ) ಇಲ್ಲಿಯವರೆಗೆ ಹಂಚಿಕೆಯಾದ ನಿವೇಶನಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)

(ಇ) ೯೪–ಸಿ ಅರ್ಜಿಗಳ ವಿಲೇವಾರಿ ಮತ್ತು ನಿವೇಶನಗಳನ್ನು ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ನಿವೇಶನ ಮಂಜೂರಾತಿ ಸಂದರ್ಭಗಳಲ್ಲಿ ವಿಧಿಸುತ್ತಿರುವ ಶುಲ್ಕವು ಅಧಿಕವಾಗಿದ್ದು, ಇದರಿಂದಾಗಿ ಗ್ರಾಮೀಣ ಬಡವರು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ೯೪–ಸಿಸಿ ಯೋಜನೆಯಲ್ಲಿನ ವಿಳಂಬ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೭ (೨೫೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಪ್ರದೇಶದ ವ್ಯಾಪ್ತಿಯಲ್ಲಿನ ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವವರಿಗೆ ಹಕ್ಕು ಪತ್ರ ನೀಡುವ ೯೪–ಸಿಸಿ ಯೋಜನೆಗೆ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆಯೇ ;

(ಆ) ೯೪–ಸಿಸಿ ಯೋಜನೆಯಡಿ ಇಲ್ಲಿಯವರೆಗೆ ಸ್ವೀಕೃತವಾದ ಅರ್ಜಿಗಳೆಷ್ಟು ;

(ಇ) ೯೪–ಸಿಸಿ ಯೋಜನೆ ಜಾರಿಯಲ್ಲಿದ್ದರೂ ಕೂಡ, ತಹಶೀಲ್ದಾರರ ಕಛೇರಿಯಲ್ಲಿ ಅರ್ಜಿ ಸ್ವೀಕರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ೯೪–ಸಿಸಿ ಯೋಜನೆಯನ್ನು ಸಮರ್ಪಕ ಅನುಷ್ಠಾನ ಮಾಡಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಕಾರ್ಮಿಕ ಕಲ್ಯಾಣ ನಿಧಿಯ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೮ (೨೫೪೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳಿಂದ ಜಮೆಯಾದ ಒಟ್ಟು ಕಾರ್ಮಿಕ ಕಲ್ಯಾಣ ನಿಧಿಯ ಮೊತ್ತವೆಷ್ಟು ;

(ಆ) ವಸೂಲಾದ ಮೊತ್ತವನ್ನು ಸದರಿ ಉದ್ದೇಶಕ್ಕೆ ಬಳಕೆ ಮಾಡಲಾಗಿದೆಯೇ ; ಹೌದಾದಲ್ಲಿ, ಖರ್ಚಾದ ಮೊತ್ತವೆಷ್ಟು ; (ವಿವರ ಒದಗಿಸುವುದು)

(ಇ) ಸ್ಥಳೀಯ ಸಂಸ್ಥೆಗಳಲ್ಲಿ ವಸೂಲಾಗುವ ಕಾರ್ಮಿಕ ಕಲ್ಯಾಣ ನಿಧಿಯ ಮೊತ್ತವನ್ನು ಸರ್ಕಾರಕ್ಕೆ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಈ) ಸ್ಥಳೀಯ ಸಂಸ್ಥೆಗಳು ಕಾರ್ಮಿಕ ಕಲ್ಯಾಣ ನಿಧಿ ಮೊತ್ತವನ್ನು ದುರುಪಯೋಗ ಮಾಡದಂತೆ ಮತ್ತು ನಿಯಮಿತವಾಗಿ ಸರ್ಕಾರದ ಖಾತೆಗೆ ಜಮೆಯಾಗುವಂತೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಡಾ: ಕಸ್ತೂರಿ ರಂಗನ್ ವರದಿಯ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೮೯ (೨೫೩೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಗ್ರಾಮಗಳು ಮತ್ತು ಜನವಸತಿಗಳು ಡಾ: ಕಸ್ತೂರಿ ರಂಗನ್ ವರದಿಯ ವ್ಯಾಪ್ತಿಗೆ ಒಳಪಡುತ್ತದೆ ; (ತಾಲ್ಲೂಕು–ಹೋಬಳಿವಾರು ವಿವರ ನೀಡುವುದು)

(ಆ) ಈ ವರದಿಯಂತೆ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ನಿಷೇಧಿಸುವ ಮತ್ತು ನಿಯಂತ್ರಣಕ್ಕೆ ಒಳಪಡುವ ಚಟುವಟಿಕೆಗಳಾವುವು ; (ಸಂಪೂರ್ಣ ವಿವರ ನೀಡುವುದು)

(ಇ) ವರದಿಯ ವ್ಯಾಪ್ತಿಗೊಳಪಡುವ ಮೂಲ ನಿವಾಸಿಗಳ ಆತಂಕ ನಿವಾರಿಸಲು ಹಾಗೂ ಅವರ ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಮೀನುಗಾರಿಕೆ ಇಲಾಖೆಯಲ್ಲಿನ ಸೌಲಭ್ಯಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೯೬೦ (೨೬೨೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ಇಲಾಖೆಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳೇನು ; ಮತ್ತು ಯೋಜನೆಗಳು ಯಾವುವು ; ವಿವಿಧ ಯೋಜನೆಗಳ ಅಡಿಯಲ್ಲಿ ಇರತಕ್ಕಂತಹ ಸೌಲಭ್ಯಗಳು ಯಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಹಾವೇರಿ ಜಿಲ್ಲೆಯಲ್ಲಿರುವ ಮೀನುಗಾರರ ಕುಟುಂಬಗಳು ಎಷ್ಟು; (ತಾಲ್ಲೂಕುವಾರು ಮತ್ತು ಗ್ರಾಮಾವಾರು ಮಾಹಿತಿ ಒದಗಿಸುವುದು)

(ಇ) ಜಿಲ್ಲೆಯಲ್ಲಿ ೨೦೧೩ ರಿಂದ ೨೦೧೫ರವರೆಗೆ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮತ್ತು ಗ್ರಾಮವಾರು ಮಾಹಿತಿ ನೀಡುವುದು)

(ಈ) ಹಾವೇರಿ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ?

## ಹಾವೇರಿ ಜಿಲ್ಲೆಯಲ್ಲಿರುವ ಕ್ರೀಡಾ ಇಲಾಖೆಯ ವಸತಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೯೧ (೨೬೧೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿರುವ ಕ್ರೀಡಾ ಇಲಾಖೆಯ ವಸತಿ ನಿಲಯ ಶಾಲೆಗಳ ಸಂಖ್ಯೆ ಎಷ್ಟು ; ಸದರಿ ವಸತಿ ಶಾಲೆಗಳು ಸ್ಥಾಪನೆಗೊಂಡಿರುವುದು ಯಾವಾಗ ; (ತಾಲ್ಲೂಕುವಾರು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಕ್ರೀಡಾ ವಸತಿ ಶಾಲೆಗಳಲ್ಲಿ ಇರುವ ಒಟ್ಟು ವಿದ್ಯಾರ್ಥಿಗಳ ಹಾಗೂ ಕ್ರೀಡಾಪಟುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಕ್ರೀಡಾಪಟುಗಳ ತರಬೇತಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನ ಎಷ್ಟು ? (ತಾಲ್ಲೂಕುವಾರು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

## ಇಲಾಖೆಯಿಂದ ಆರ್.ಟಿ.ಸಿ. ಮತ್ತು ಪೋಡಿ ಬಾಕಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೯೨ (೨೬೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಆರ್.ಟಿ.ಸಿ. ಗಳ ರಚನೆಯಲ್ಲಿ ವಿಳಂಬ ಪೋಡಿ ಬಾಕಿ ಹಾಗೂ ಖಾತಾ ಬದಲಾವಣೆ ಸೇರ್ಪಡೆಗಳು ಸಮರ್ಪವಾಗಿ ಜರುಗದೇ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಂತಹ ಪ್ರಕರಣಗಳ ಇತ್ಯರ್ಥಕ್ಕೆ ಕಂದಾಯ ಅದಾಲತ್‌ಗಳನ್ನು ಮಾಡಲು ಸರ್ಕಾರ ಮುಂದಾಗುವುದೇ ;

(ಇ) ಇದುವರೆಗೂ ಇತ್ಯರ್ಥಪಡಿಸಿದ ಪ್ರಕರಣಗಳು ಹಾಗೂ ಬಾಕಿ ಇರುವ ಪ್ರಕರಣಗಳು ಎಷ್ಟು ಇವುಗಳನ್ನು ಯಾವಾಗ ಇತ್ಯರ್ಥಗೊಳಿಸಲು ಸರ್ಕಾರ ಉದ್ದೇಶಿಸಿದೆ ;

(ಈ) ಕಂದಾಯ ಇಲಾಖೆಯ ಹಲವು ಸೇವೆಗಳನ್ನು ಸಕಾಲ ವ್ಯಾಪ್ತಿಗೆ ಸೇರಿಸಿದ್ದರೂ ಪರಿಣಾಮಕಾರಿ ಪ್ರಗತಿ ಕಾಣದಿರುವ ಬಗ್ಗೆ ಸರ್ಕಾರದ ನಿಲುವೇನು ಸ್ಪಷ್ಟಪಡಿಸುವುದು ;

(ಉ) ಈ ನಿಟ್ಟಿನಲ್ಲಿ ಸಮಗ್ರ ವರದಿ ಮಾಹಿತಿಗಾಗಿ ಸರ್ಕಾರ ಕಂದಾಯ ಇಲಾಖಾ ಶ್ವೇತಪತ್ರಕ್ಕೆ ಮುಂದಾಗುವುದೇ ; (ವಿವರ ನೀಡುವುದು)

(ಊ) ಹಾವೇರಿ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮಗಳ ಸಂಪೂರ್ಣ ಮಾಹಿತಿಯನ್ನು ತಾಲ್ಲೂಕುವಾರು ವಿವರ ನೀಡುವುದು ?

## ಪೋಡಿ ಪ್ರಕರಣ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೯೩ (೨೫೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೋಡಿ ಪ್ರಕರಣಗಳನ್ನು ಸಮರೋಪಾದಿಯಲ್ಲಿ ಮುಗಿಸಿ, ರೈತರಿಗೆ ಹಾಗೂ ಜನಸಾಮಾನ್ಯರ ನೆರವಿಗೆ ಬರಲು ಸರ್ಕಾರ ಕೈಗೊಂಡ ಕ್ರಮಗಳಾವುವು ; ಕಾರ್ಯಕ್ರಮದ ರೂಪುರೇಷೆಗಳೇನು ;

(ಆ) ಯಾವ ಯಾವ ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮ ಭರದಿಂದ ಸಾಗಿದೆ ; ಈ ಕಾರ್ಯಕ್ರಮ ಪ್ರಾರಂಭಗೊಂಡಿದ್ದು ಯಾವಾಗ ; (ಜಿಲ್ಲಾವಾರು ಪ್ರಗತಿಯ ವಿವರ ಒದಗಿಸುವುದು)

(ಇ) ಈ ಯೋಜನೆಯನ್ನು ಜಾರಿಗೊಳಿಸುವಲ್ಲಿಯೂ ಸಹ ತಾರತಮ್ಯ, ತಾಲ್ಲೂಕು ಮಟ್ಟದಲ್ಲಿ ಕೆಲವೊಂದು ಗ್ರಾಮಗಳ ಕಾರ್ಯವನ್ನು ವಿಳಂಬ ಮಾಡುವುದನ್ನು ತಡೆಯಲು ಈ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ವೇಗ ನೀಡಲು ಸರ್ಕಾರ ಚಿಂತಿಸುವುದೇ ;

(ಈ) ಈ ಕಾರ್ಯಕ್ರಮಕ್ಕೆ ಜನರಿಂದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು ತಾಲ್ಲೂಕು ಮಟ್ಟದಲ್ಲಿ ಯಾವ ಗ್ರಾಮವೂ ಸಹ ಪೋಡಿ ಪ್ರಕರಣ ಕಾರ್ಯದಿಂದ ವಂಚಿತರಾಗದಂತೆ ಎಚ್ಚರ ವಹಿಸಲಾಗುವುದೇ ?

## ಕೆ.ಸಿ. ವ್ಯಾಲಿ ಯೋಜನೆಯ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೦೯೪ (೨೫೪೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ನೀರುಣಿಸಲು ಕೈಗೆತ್ತಿಕೊಂಡಿರುವ ಕೆ.ಸಿ. ವ್ಯಾಲಿ ಯೋಜನೆ ಎಂದಿನಿಂದ ಪ್ರಾರಂಭವಾಗಲಿದೆ ;

(ಆ) ಕೆ.ಸಿ. ವ್ಯಾಲಿ ಯೋಜನೆಯ ರೂಪುರೇಷೆಗಳೇನು ;

(ಇ) ಈ ಯೋಜನೆಗೆ ಮೀಸಲಿಟ್ಟಿರುವ ಅಂದಾಜು ಮೊತ್ತವೆಷ್ಟು ;

(ಈ) ಈ ಯೋಜನೆಯು ಪೂರ್ಣಗೊಳ್ಳುವುದು ಯಾವಾಗ ?

## ರೈತರು ಜಮೀನಿನ ಸರ್ವೆ ಕಾರ್ಯದ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೦೯೫ (೨೫೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ರೈತರು ತಮ್ಮ ಜಮೀನಿನ ಸರ್ವೆಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸಲ್ಲಿಸಿರುವ ಅರ್ಜಿಗಳಲ್ಲಿ ಇದುವರೆವಿಗೂ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಿ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; ಬಾಕಿ ಉಳಿಸಿಕೊಳ್ಳಲು ಕಾರಣಗಳೇನು ;

(ಇ) ರಾಜ್ಯ ರೈತರ ಮನವಿಗಳಿಗೆ ಸರ್ವೆ ಇಲಾಖೆ ಅಧಿಕಾರಿಗಳು ಸ್ಪಂದಿಸದೇ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಈ) ರೈತರ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿ ಮತ್ತು ನೌಕರರು ಯಾರು ; ಇವರುಗಳ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಶಿಸ್ತಿನ ಕ್ರಮಗಳೇನು ;

(ಉ) ರೈತರ ಜಮೀನಿನ ಸರ್ವೆ ಕಾರ್ಯ ತ್ವರಿತವಾಗಿ ಪೂರೈಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ? (ವಿವರ ನೀಡುವುದು)

## ಜವಳಿ ಪಾರ್ಕ್ ಯೋಜನೆ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೦೯೬ (೨೫೪೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆ ಯಾವ ಹಂತದಲ್ಲಿದೆ ; ಇದರಿಂದ ಸಮಾಜಕ್ಕೆ ಆಗುವ ಸಹಾಯವೇನು ;

(ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈಗಾಗಲೇ ಜವಳಿ ಪಾರ್ಕ್ ರಚನೆಯಾಗಿದೆ ; ಯಾವ ಯಾವ ಜಿಲ್ಲೆಗಳಲ್ಲಿ ರಚನೆಯಾಗಬೇಕಾಗಿದೆ ;

(ಇ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು ? (ವಿವರ ಒದಗಿಸುವುದು)

## ಕಂದಾಯ ಇಲಾಖೆಯಲ್ಲಿ ಪೋಡಿಗಾಗಿ ಬಂದಿರುವ ಅರ್ಜಿಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೨೦೯೭ (೨೫೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೩–೧೪, ೨೦೧೪–೧೫ನೇ ಸಾಲಿನಲ್ಲಿ ಜಮೀನುಗಳಲ್ಲಿ ಪೋಡಿ ಮಾಡಿಕೊಳ್ಳಲು ಬಂದಿರುವ ಅರ್ಜಿಗಳೇಷ್ಟು ;

(ಆ) ಪೋಡಿ ಮಾಡಲು ಇಲಾಖೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಜಮೀನುದಾರರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಅವಧಿಯಲ್ಲಿ ಪೋಡಿ ಮಾಡಿಸಲು ಬಂದ ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ ;

(ಇ) ಪೋಡಿ ಮಾಡಲು ಆಗುತ್ತಿರುವ ವಿಳಂಬಕ್ಕೆ ಕಾರಣ ಏನು ; ಜಮೀನುದಾರರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು ?

# ಪಶ್ಚಿಮಘಟ್ಟದ ಅರಣ್ಯ ಭೂಮಿಯಲ್ಲಿ ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಂಡಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೯೮ (೨೫೫೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನಹೊಳೆ ಯೋಜನೆ ಅನುಷ್ಠಾನವನ್ನು ಸಂದರ್ಭದಲ್ಲಿ ಎಷ್ಟು ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಕೈಗೊಳ್ಳಲಾಗುವುದು ;

(ಆ) ಈ ಯೋಜನೆ ಅನುಷ್ಠಾನವನ್ನು "ರಕ್ಷಿತಾರಣ್ಯ" (Reserved Forest) ಭೂಮಿಯಲ್ಲಿ ಯೋಜನೆ ಕಾಮಗಾರಿಗಳನ್ನು ಕೈಗೊಳ್ಳಲು ಪರಿಸರ ಇಲಾಖೆಯ ಅನುಮತಿ ಪಡೆಯಲಾಗಿದೆಯೇ ;

(ಇ) ಪಶ್ಚಿಮಘಟ್ಟದ ಅರಣ್ಯ ಭೂಮಿಯಲ್ಲಿ ಎತ್ತಿನಹೊಳೆ ಯೋಜನೆ ಕೈಗೊಳ್ಳುವುದರಿಂದ ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮಗಳೇನು ; ಈ ಬಗ್ಗೆ ಇಲಾಖೆ ಗಮನಹರಿಸಿದೆಯೇ ;

(ಈ) "ರಕ್ಷಿತಾರಣ್ಯ" ಪ್ರದೇಶದಲ್ಲಿ ಸಾರ್ವಜನಿಕ ಹಿತಾಸಕ್ತಿ ಯೋಜನೆಗಳನ್ನು ಕೈಗೊಳ್ಳಲು ಕಾನೂನಿನಲ್ಲಿ ಅವಕಾಶ ಇದೆಯೇ ; ಈ ಹಿಂದೆ ಇಂತಹ ಯೋಜನೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಳ್ಳಲಾಗಿದೆಯೇ ? (ವಿವರ ನೀಡುವುದು)

# ಕರಾವಳಿ ಜಿಲ್ಲೆಯಲ್ಲಿ ಹರಿಯುವ ನದಿಗಳಿಗೆ ಕಿರು ಅಣೆಕಟ್ಟು ನಿರ್ಮಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೦೯೯ (೨೫೪೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಜಿಲ್ಲೆಯಲ್ಲಿ ಹರಿಯುವ ನದಿಗಳಿಗೆ ಕಿರು ಅಣೆಕಟ್ಟುಗಳನ್ನು ನಿರ್ಮಿಸಿ ನೀರಿನ ಮಟ್ಟವನ್ನು ಏರಿಕೆ ಮಾಡಬೇಕೆಂಬ ಬೇಡಿಕೆಗೆ ಇಲಾಖೆ ಸ್ಪಂದಿಸಿದೆಯೇ ; ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಆ) ಕರಾವಳಿ ಭಾಗದಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿರುವುದರಿಂದ ಕೃಷಿಗೆ ತೊಂದರೆಯಾಗುವುದರ ಬಗ್ಗೆ ಇಲಾಖೆ ಗಮನಹರಿಸಿದೆಯೇ ; ಪ್ರಸ್ತುತ ಕರಾವಳಿ ಭಾಗಗಳಲ್ಲಿ ನೀರಿನ ಮಟ್ಟ ಏರಿಸಲು ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಉಭಯ ಜಿಲ್ಲೆಗಳಲ್ಲಿ ಕೆರೆಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದ ಅನುದಾನ ಎಷ್ಟು ; ಯಾವ ಯಾವ ಕೆರೆಗಳ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ ; ವಿವರ ನೀಡುವುದು ಗುಜ್ಜರಕೆರೆ ಅಭಿವೃದ್ಧಿಗೆ ಮಂಜೂರಾದ ಹಣದಿಂದ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ವಿವರ ಒದಗಿಸುವುದು)

(ಈ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆರೆಗಳ ಅಭಿವೃದ್ಧಿಗೆ ಒದಗಿಸಲಾದ ಅನುದಾನ ಎಷ್ಟು ; ವರ್ಷಾವಾರು ವಿವರ ನೀಡುವುದು ; ಉಭಯ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆ ೨೦೧೩-೧೪, ೨೦೧೪-೧೫ರಲ್ಲಿ ಕೈಗೊಂಡ ಯೋಜನೆಗಳೇನು ? (ವಿವರ ನೀಡುವುದು)

## ಮೂಲಸೌಕರ್ಯಗಳಿಲ್ಲದ ಕಟ್ಟಡದಲ್ಲಿ ಕಛೇರಿ ಸ್ಥಾಪಿಸಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೨೧೦೦ (೨೫೫೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕರ ಇಲಾಖೆಯ ಜಿಲ್ಲಾ ಕಟ್ಟಡಕ್ಕೆ ಸ್ಥಳ ಗುರುತಿಸಲಾಗಿದ್ದರೂ ಸಹ ಸ್ವಂತ ಕಟ್ಟಡ ನಿರ್ಮಾಣಕ್ಕೆ ವಿಳಂಬಗೊಳ್ಳುತ್ತಿರುವುದಕ್ಕೆ ಕಾರಣಗಳೇನು ;

(ಆ) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬಾಡಿಗೆ ಕಟ್ಟಡಕ್ಕೆ ತಿಂಗಳೊಂದಕ್ಕೆ ನೀಡುವ ಬಾಡಿಗೆ ಎಷ್ಟು ; ೨ನೇ ಮಹಡಿಯಲ್ಲಿ ಕಛೇರಿ ಕಾರ್ಯ ನಿರ್ವಹಿಸುವುದರಿಂದ ಕಾರ್ಮಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಮೂಲ ಸೌಕರ್ಯಗಳಿಲ್ಲದೆ ಈ ಕಟ್ಟಡದಲ್ಲಿ ಕಛೇರಿ ಸ್ಥಾಪಿಸಲು ಕಾರಣಗಳೇನು ; (ವಿವರ ನೀಡುವುದು)

(ಇ) ಕಾರ್ಮಿಕರಿಗೆ ಸಂಧಾನವನ್ನು ಏರ್ಪಡಿಸಲು ಈ ಕಛೇರಿಯಲ್ಲಿ ಮೂಲಸೌಕರ್ಯ ಇಲ್ಲದೇ ಇರುವುದು ಇಲಾಖೆ ಗಮನಕ್ಕೆ ಬಂದಿದೆಯೇ ; ಕಛೇರಿಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಕಾರ್ಮಿಕರಿಗೆ ಉಂಟಾಗುವ ತೊಂದರೆಗಳನ್ನು ನಿರ್ವಹಿಸಲು ಇಲಾಖೆ ಕೈಗೊಂಡ ಕ್ರಮಗಳೇನು ;

(ಈ) ಕಾರ್ಮಿಕ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಸದರಿ ಹುದ್ದೆಗಳು ಭರ್ತಿ ಮಾಡಲಾಗುವುದು ಯಾವಾಗ ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣಕ್ಕೆ ಸ್ಥಳ ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೧೦೧ (೨೫೫೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ಸ್ಥಾಪಿಸಲು ಸ್ಥಳ ಗುರುತು ಬಗ್ಗೆ ಇಲಾಖೆ ಸಾಧಿಸಿರುವ ಪ್ರಗತಿ ಏನು ; ಈ ಕ್ರೀಡಾಂಗಣವನ್ನು ಯಾವ ಕ್ರಿಕೆಟ್ ಅಸೋಸಿಯೇಷನ್ ಮುಖಾಂತರ ಸ್ಥಾಪಿಸಲಾಗುವುದು ;

(ಆ) ಕ್ರೀಡಾಂಗಣಕ್ಕೆ ಬೇಕಾದ ಭೂಮಿ ಎಷ್ಟು ; ಪ್ರಸ್ತುತ ಗುರುತಿಸಿರುವ ಸೂಕ್ತ ಸ್ಥಳಗಳಲ್ಲಿ ಲಭ್ಯವಿರುವ ಭೂಮಿ ಎಷ್ಟು ;

(ಇ) ಕ್ರೀಡಾಂಗಣಕ್ಕೆ ಸಂಬಂಧಿಸಿದಂತೆ ನಿಗದಿತ ಯೋಜನಾ ವರದಿಯನ್ನು ತಯಾರಿಸಿದೆಯೇ ;

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಂತರರಾಷ್ಟ್ರೀಯ ಮಟ್ಟದ ಈಜುಕೊಳ ಕಾಮಗಾರಿ ವಿಳಂಬಗೊಳ್ಳಲು ಕಾರಣವೇನು ; ಈ ಬಗ್ಗೆ ಎಷ್ಟು ಅನುದಾನವನ್ನು ಮೀಸಲು ಇಡಲಾಗಿದೆ ; (ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯಲ್ಲಿ ತಯಾರಿಸಲಾದ ಸಿಂಥೆಟಿಕ್ ಟ್ರಾಕ್‌ಗೆ ಸರ್ಕಾರದಿಂದ ಖರ್ಚು ಮಾಡಿದ ಒಟ್ಟು ಹಣ ಎಷ್ಟು ; ಯಾವ ಯಾವ ಮೂಲಗಳಿಂದ ಹಣವನ್ನು ಖರ್ಚು ಮಾಡಲಾಗಿದೆ ? (ವಿವರ ನೀಡುವುದು)

## ನೆರವಾರದಲ್ಲಿ ಕ್ರೀಡಾಂಗಣ ನಿರ್ಮಿಸಿರುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦೨ (೨೫೫೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ನೆರವಾರದಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಲು ೫೦ ಲಕ್ಷ ಅನುದಾನ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಶ್ರಮಶಕ್ತಿ ಭವನ ನಿರ್ಮಾಣ ಹಾಗೂ ITI ಕಾಲೇಜು ಪ್ರಾರಂಭಿಸುವ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦೩ (೨೫೫೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರಿನಲ್ಲಿ ಶ್ರಮಶಕ್ತಿ ಭವನ ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಆ) ೨೦೧೫–೧೬ನೇ ಸಾಲಿನಲ್ಲಿ ಮಾನ್ವಿಯಲ್ಲಿ ITI ಕಾಲೇಜು ಪ್ರಾರಂಭಿಸಲು ಮಂಜೂರಾತಿ ನೀಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ರಾಯಚೂರು ಜಿಲ್ಲೆಯಲ್ಲಿ ಭೂಮಾಪಕರ ಹುದ್ದೆ ಕೊರತೆ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦೪ (೨೫೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಭೂಮಾಪಕರ ಹುದ್ದೆ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಆ) ಇಲ್ಲಿಯವರೆಗೂ ಎಷ್ಟು ಸಿಬ್ಬಂದಿಗಳನ್ನು ಭೂಮಾಪಕರ ಹುದ್ದೆಗೆ ನೇಮಕಾತಿ ಮಾಡಲಾಗಿದೆ ?

## NRBC ಕಾಲುವೆಯ ಕಾಮಗಾರಿ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦೫ (೨೫೫೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) NRBC ಕಾಲುವೆಯ ವಿಸ್ತೀರ್ಣ ಎಷ್ಟು ; ಆ ಪೈಕಿ ಎಷ್ಟು ಕಾಮಗಾರಿಯನ್ನು ಪೂರೈಸಲಾಗಿದೆ ; ಉಳಿದಿರುವಂತಹ ಕಾಲುವೆ ಉದ್ದ ಎಷ್ಟು ;

(ಆ) ಇದರಿಂದ ರಾಯಚೂರು ತಾಲ್ಲೂಕಿನ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ ;

(ಇ) ಈಗಾಗಲೇ ಕುಡಿಯುವ ನೀರಿಗಾಗಿ ರಾಯಚೂರು ನಗರ ಹಾಗೂ ಅರವತ್ತು ಗ್ರಾಮಗಳ ನಿರ್ಮಿಸಿರುವ ಗಣೆಕಲ್ ಸಮತೋಲನ ಜಲಾಶಯಕ್ಕೆ NRBC ೧೦೬ ಮೈಲು ಲಿಂಕ್ ಕ್ಯಾನಲ್ ಮಾಡುವ ಯೋಜನೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಈ) ತುಂಗಭದ್ರಾ ಜಲಾಶಯ ಹೂಳು ತೆಗೆಯಲು ಕರೆದಿರುವ ಗ್ಲೋಬಲ್ (Global) ಟೆಂಡರ್ (Tender) ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಭೂಮಿ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦೬ (೨೫೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಇರುವ ಅರಣ್ಯ ಭೂಮಿ ಎಷ್ಟು ;

(ಆ) ಅರಣ್ಯ ಬೆಳೆಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಜವಳಿ ಪಾರ್ಕ್ ನಿರ್ಮಾಣದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೧೦೭ (೨೫೬೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇದುವರೆಗೂ ನಿರ್ಮಾಣವಾಗಿರುವ ಜವಳಿ ಪಾರ್ಕ್‌ಗಳೆಷ್ಟು ;

(ಆ) ಯಾವ ಯಾವ ಜಿಲ್ಲೆಗಳಲ್ಲಿ ಜವಳಿ ಪಾರ್ಕ್ ನಿರ್ಮಾಣಗೊಂಡಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ನೇಕಾರರು ಬಹು ಸಂಖ್ಯೆಯಲ್ಲಿದ್ದು, ಇದುವರೆಗೂ ಜವಳಿ ಪಾರ್ಕ್ ಮಾಡದಿರಲು ಕಾರಣವೇನು ;

(ಈ) ೨೦೧೫–೧೬ನೇ ಸಾಲಿನಲ್ಲಿ ಹೊಸದಾಗಿ ಜವಳಿ ಪಾರ್ಕ್‌ಗಳನ್ನು ತೆರೆಯಲು ಉದ್ದೇಶಿಸಿರುವ ಜಿಲ್ಲೆಗಳಾವುವು ?

## ಕ್ರೀಡಾಪಟುಗಳಿಗೆ ಪ್ರೋತ್ಸಾಹ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೧೦೮ (೨೫೬೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೩-೧೪ ಹಾಗೂ ೨೦೧೪-೧೫ ಸಾಲಿನಲ್ಲಿ ಕ್ರೀಡಾ ಕಾರ್ಯಕ್ರಮ ನಡೆಸಲು ಎಷ್ಟು ಸಂಘ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ ; ಧನ ಸಹಾಯ ಪಡೆದಿರುವ ಸಂಘ ಸಂಸ್ಥೆಗಳು ಯಾವುವು ; (ವಿಳಾಸ ಸಹಿತ ಜಿಲ್ಲಾವಾರು ವಿವರ ನೀಡುವುದು)

(ಆ) ಯುವ ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ನೀಡಲು ಯಾವ ಯಾವ ಸೌಲಭ್ಯ ನೀಡಲಾಗುತ್ತಿದೆ ; (ವಿವರ ನೀಡುವುದು)

(ಇ) ಉತ್ತಮ ಕ್ರೀಡಾ ಪಟ್ಟುಗಳಿಗೆ ಯಾವ ಯಾವ ರಾಜ್ಯ ಹಾಗೂ ಜಿಲ್ಲಾ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ; ೨೦೧೨-೧೩, ೨೦೧೩-೧೪ ಹಾಗೂ ೨೦೧೪-೧೫ನೇ ಸಾಲಿನಲ್ಲಿ ಪ್ರಶಸ್ತಿ ಪಡೆದ ಪಟುಗಳ ಸಂಖ್ಯೆ ಎಷ್ಟು ? (ಪ್ರಶಸ್ತಿವಾರು ಕ್ರೀಡಾಪಟುಗಳ ವಿವರ ನೀಡುವುದು)

## ಕೈಮಗ್ಗ ನಿಗಮದ ಅವ್ಯವಸ್ಥೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೧೮೯ (೨೫೬೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷದಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನೇಕಾರರಿಗೆ ನೂಲು, ಭೀಮು ಸಿಗದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಎಷ್ಟು ಕಡೆ ಕೇಂದ್ರ–ಉಪಕೇಂದ್ರಗಳಿವೆ ; ಎಲ್ಲೆಲ್ಲಿ ಈ ರೀತಿ ತೊಂದರೆಯಾಗಿ ನೇಕಾರರು ಧರಣಿ ಮಾಡಿರುತ್ತಾರೆ ;

(ಇ) ಹಾಗಿದ್ದಲ್ಲಿ, ನಿಗಮ ನೇಕಾರರಿಗೆ ಸಮರ್ಪಕವಾಗಿ ಎಂದಿನಿಂದ ನೀಡಲಾಗುವುದು ;

(ಈ) ನೇಕಾರರಿಗೆ ಪರಿವರ್ತನಾ ಹಣ ಸರಿಯಾಗಿ ತಲುಪಿಸದಿರುವ ಬಗ್ಗೆ ದೂರುಗಳೇನಾದರೂ ಬಂದಿವೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು ;

(ಉ) ಅನೇಕ ದೂರುಗಳು ಬಂದರೂ ನಿವಾರಣೆ ಮಾಡಲು ಇರುವ ತೊಂದರೆಗಳೇನು ; ಯಾವಾಗ ಸರಿಪಡಿಸಲಾಗುವುದು ;

(ಊ) ಈ ನಿಟ್ಟಿನಲ್ಲಿ ಈವರೆವಿಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು ; ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲಾಗುವುದು ?

## ಅಕ್ರಮ ಬೇಟೆಗಾರರ ಮೇಲೆ ಕೈಗೊಳ್ಳುವ ಕಾನೂನು ಕ್ರಮಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೧೧೦ (೨೫೬೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಹುಲಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕಾಡು ಪ್ರಾಣಿಗಳನ್ನು ಬೇಟೆ ಆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ದಾಖಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಅನಧಿಕೃತವಾಗಿ ಶ್ರೀಗಂಧ ಮತ್ತು ರಕ್ತಚಂದನದ ಮರದ ಕಳ್ಳ ಸಾಗಾಣಿಕೆ ನಡೆದಿರುವ ಎಷ್ಟು ಪ್ರಕರಣಗಳು ದಾಖಲಾಗಿವೆ ; ಈ ಬಗ್ಗೆ ಕೈಗೊಂಡಿರುವ ಕಾನೂನು ಕ್ರಮಗಳೇನು ;

(ಈ) ಕರಡಿ, ಕಾಡು ಹಂದಿಗಳ, ನವಿಲು ಮತ್ತು ಇತರೆ ಪಕ್ಷಿಗಳ ನಿರಂತರ ಬೇಟೆ ಆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಕೈಗೊಂಡಿರುವ ಕಾನೂನು ಕ್ರಮಗಳೇನು;

(ಉ) ರಾಜ್ಯದಲ್ಲಿ ಅಕ್ರಮ ಬೇಟೆಗಾರರ ಮೇಲೆ ಕೈಗೊಳ್ಳುವ ಕಾನೂನು ಕ್ರಮಗಳ ವಿವರ ನೀಡುವುದು ?

## ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ನಲಜೇರಿ ಕೆರೆಯು ಕೊಚ್ಚಿ ಹೋಗುತ್ತಿರುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೧೧ (೨೫೬೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨–೧೩ನೇ ಸಾಲಿನ ಮಳೆಗಾಲದಲ್ಲಿ ಕೊಪ್ಪಳ ಜಿಲ್ಲೆಯ, ಯಲಬುರ್ಗಾ ತಾಲ್ಲೂಕಿನ ನೆಲಜೇರಿ ಕೆರೆಯು ಕೊಚ್ಚಿ ಹೋಗಲು ಕಾರಣವೇನು ;

(ಆ) ಸದರಿ ಕೆರೆಯ ದುರಸ್ತಿಗಾಗಿ ಸರ್ಕಾರ ಮಂಜೂರು ಮಾಡಿದ ಅನುದಾನವೆಷ್ಟು ;

(ಇ) ಸದರಿ ಕೆರೆಯು ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳದೇ ದುರಸ್ತಿ ಕಾರ್ಯಕೈಗೊಂಡಿರುವುದನ್ನು ಇಲಾಖೆ ಹೇಗೆ ಸಮರ್ಥಿಸಿಕೊಳ್ಳುವುದು ;

(ಈ) ದುರಸ್ತಿ ಕಾರ್ಯದ ಗುತ್ತಿಗೆಯನ್ನು ಯಾವ ಕಂಪನಿ ನಿರ್ವಹಿಸಿದೆ ;

(ಉ) ಸದ್ಯ ದುರಸ್ತಿ ಕಾರ್ಯ ಯಾವ ಹಂತದಲ್ಲಿದೆ ?

## ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿಯಿಂದ ರೈತರಿಗೆ ತೊಂದರೆಯಾಗುತ್ತಿರುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೧೨ (೨೫೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿಯಿಂದ ಬೇಸತ್ತು ರೈತರು ಸುಮಾರು ವರ್ಷಗಳಿಂದ ಸಾವಿರಾರು ಎಕರೆ ಭೂಪ್ರದೇಶವನ್ನು ಬಿತ್ತನೆ ಮಾಡದೇ ಪಾಳು ಬಿಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ;

(ಇ) ಜಿಂಕೆ ಹಾವಳಿಯಿಂದ ಮನನೊಂದು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಈ) ಈ ಭಾಗದಲ್ಲಿರುವ ಜಿಂಕೆಗಳ ಸಂಖ್ಯೆ ಎಷ್ಟು ; ಇವುಗಳ ಸ್ಥಳಾಂತರಕ್ಕೆ ಅಥವಾ ಜಿಂಕೆ ವನ ನಿರ್ಮಾಣಕ್ಕೆ ಸರ್ಕಾರ ಮುಂದಾಗುತ್ತದೆಯೇ;

(ಉ) ಜಿಂಕೆ ವನ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಹಣ ಮೀಸಲಿರಿಸಿದ್ದರೂ ವನ ನಿರ್ಮಾಣ ವಿಳಂಬಕ್ಕೆ ಕಾರಣಗಳೇನು ;

(ಊ) ೨೦೧೦–೧೧ ರಿಂದ ಪ್ರಸಕ್ತ ಸಾಲಿನವರೆಗೂ ಜಿಂಕೆ ಹಾವಳಿಗೆ ತುತ್ತಾದ ರೈತರ ಜಮೀನುಗಳಿಗೆ ವಿತರಿಸಲಾದ ಪರಿಹಾರ ಧನದ ಮೊತ್ತ ಎಷ್ಟು ?

## ಕೃಷ್ಣ ಮೇಲ್ದಂಡೆ ಯೋಜನೆ ಹಂತ–೩ರಲ್ಲಿ ಕೈಗೊಂಡ ಪ್ರಗತಿ ಕಾಮಗಾರಿಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೧೩ (೨೫೬೯) ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣ ಮೇಲ್ದಂಡೆ ಯೋಜನೆ ಹಂತ–೩ರಲ್ಲಿ ಎಷ್ಟು ಯೋಜನೆಗಳು ಬರುತ್ತವೆ;

(ಆ) ಪ್ರತಿಯೊಂದು ಯೋಜನೆಯ ಕಾರ್ಯ ಸಧ್ಯ ಯಾವ ಹಂತದಲ್ಲಿದೆ; ಸಂಪೂರ್ಣ ಮಾಹಿತಿ ನೀಡುವುದು ;

(ಇ) ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪ್ರತಿಯೊಂದು ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ವಿವರಣೆ ನೀಡುವುದು;

(ಈ) ಕೊಪ್ಪಳ ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯಿಂದ ಎಷ್ಟು ಯೋಜನೆಗಳು ಜಾರಿಯಲ್ಲಿವೆ ಮಾಹಿತಿ ನೀಡುವುದು?

## ೨೦೧೫–೧೬ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನದಲ್ಲಿ ಕೈಗೊಂಡ ಯೋಜನೆಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೧೪ (೨೫೬೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನಲ್ಲಿ ಆಯವ್ಯಯದಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಒದಗಿಸಿದ ಅನುದಾನ ಎಷ್ಟು;

(ಆ) ಒದಗಿಸಿದ ಅನುದಾನದಲ್ಲಿ ಕೈಗೊಂಡ ಯೋಜನೆಗಳಾವುವು; ಯೋಜನೆಗಳಿಗೆ ಖರ್ಚು ಮಾಡಿದ ಅನುದಾನ ಎಷ್ಟು;

(ಇ) ಸದ್ಯ ಯೋಜನೆಗಳು ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು)

(ಈ) ಅರಣ್ಯ ಇಲಾಖೆಯಿಂದ ಕೊಪ್ಪಳ ಜಿಲ್ಲೆಯಲ್ಲಿ ಕೈಗೊಂಡ ಯೋಜನೆಗಳಾವುವು? (ಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ಸ್ವಾಮ್ಯದ ಪ್ರಿಯದರ್ಶಿನಿ ಸಂಸ್ಥೆಯ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೨೧೧೫ (೨೫೭೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಸರ್ಕಾರಿ ಸ್ವಾಮ್ಯದ ಪ್ರಿಯದರ್ಶಿನಿ ಸಂಸ್ಥೆಯು ಎಷ್ಟು ವಹಿವಾಟು ಮಾಡಿದೆ ಸದರಿ ವಹಿವಾಟಿನ ಪೂರ್ಣ ಮಾಹಿತಿಯನ್ನು ಒದಗಿಸುವುದು;

(ಆ) ಸರ್ಕಾರಿ ಶಾಲೆಯ ಮಕ್ಕಳಿಗೆ ಒದಗಿಸುವ ಸಿದ್ಧ ಉಡುಪುಗಳನ್ನು ಈ ಸಂಸ್ಥೆಯಿಂದಲೇ ಒದಗಿಸಲಾಗುತ್ತಿದೆಯೇ;

(ಇ) ಪ್ರಿಯದರ್ಶಿನಿ ಸಂಸ್ಥೆಯ ರಾಜ್ಯದ ನೇಕಾರರಿಗೆ ಪ್ರೋತ್ಸಾಹಿಸಲು ಯಾವ ಹೊಸ ಯೋಜನೆಗಳನ್ನು ರೂಪಿಸಿದೆ ಮಾಹಿತಿ ನೀಡುವುದು?

## ರಾಜ್ಯದಲ್ಲಿ ಅರಣ್ಯ ಭೂಮಿ ಒತ್ತುವರಿ ತೆರವಿಗೆ ತೆಗೆದುಕೊಂಡ ಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೨೧೧೬ (೨೫೭೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಒತ್ತುವರಿಯಾದ ಭೂಮಿಯನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಮತ್ತು ವಶಪಡಿಸಿಕೊಂಡ ಭೂಮಿಯ ಪ್ರಮಾಣವೆಷ್ಟು;

(ಇ) ಈ ರೀತಿ ಅರಣ್ಯ ಭೂಮಿ ಒತ್ತುವರಿಯಾಗುವ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರಣ್ಯ ಸಿಬ್ಬಂದಿ ಹಾಗೂ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಜರುಗಿಸಿದೆ?

## ಎತ್ತಿನಹೊಳೆ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೨೧೧೭ (೨೫೭೩) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎತ್ತಿನಹೊಳೆ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿದೆ;

(ಆ) ಈ ಯೋಜನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಕರಾವಳಿ ಭಾಗದ ಜನರು/ಜನಪ್ರತಿನಿಧಿಗಳು ಧ್ವನಿ ಎತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಯೋಜನೆಯ ಬಗ್ಗೆ ಪರ ಮತ್ತು ವಿರೋಧ ವ್ಯಕ್ತವಾಗುವುದರ ಹಿನ್ನಲೆಯಲ್ಲಿ ಇದರ ಬಗ್ಗೆ ಸರ್ಕಾರದ ನಿಲುವೇನು?

## ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೨೧೧೮ (೨೫೭೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಈವರೆಗೆ ನೋಂದಣಿ ಮಾಡಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು; (ವಿಷಯವಾರು ಮಾಹಿತಿ ಒದಗಿಸುವುದು)

(ಇ) ಕಳೆದ ೩ ವರ್ಷಗಳಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಿಂದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿದೆ; (ಜಿಲ್ಲಾವಾರು, ವಿಷಯವಾರು ಮಾಹಿತಿ ನೀಡುವುದು)

(ಈ) ಈ ಉದ್ಯೋಗ ವಿನಿಮಯ ಕೇಂದ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಗದಗ ಜಿಲ್ಲೆಯ ಕೆರೆಗಳ ಬಗ್ಗೆ ಮಾಹಿತಿ ನೀಡಿ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೨೧೧೯ (೨೫೭೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗದಗ ಜಿಲ್ಲೆಯಲ್ಲಿರುವ ಸಣ್ಣ–ದೊಡ್ಡ ಕೆರೆಗಳು ಎಷ್ಟು; ಆಯಾ ಕೆರೆಗಳ ಹೆಸರುಗಳೊಂದಿಗೆ ತಾಲ್ಲೂಕುವಾರು ವಿವರಣೆ ನೀಡುವುದು;

(ಆ) ಈ ಕೆರೆಗಳಲ್ಲಿ ನೀರಾವರಿಗಾಗಿ ಹಾಗೂ ಕುಡಿಯುವ ನೀರಿಗಾಗಿ ಬಳಸುತ್ತಿರುವ ಕೆರೆಗಳ ಬಗ್ಗೆ ತಾಲ್ಲೂಕುವಾರು ವಿವರಣೆ ನೀಡುವುದು;

(ಇ) ಕಳೆದ ೩ ವರ್ಷಗಳಲ್ಲಿ ಈ ಕೆರೆಗಳ ನಿರ್ವಹಣೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ವರ್ಷಾವಾರು ವಿವರ ನೀಡುವುದು)

(ಈ) ಕಳೆದ ೩ ವರ್ಷಗಳಲ್ಲಿ ಈ ಕೆರೆಗಳ ಅಭಿವೃದ್ಧಿಗಾಗಿ ಯಾವುದಾದರೂ ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ?

## ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೨೦ (೨೫೯೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪ ಹಾಗೂ ೨೦೧೫ರಲ್ಲಿ ರಾಜ್ಯ ಸರ್ಕಾರ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು; ಖರ್ಚಾದ ಹಣವೆಷ್ಟು;

(ಆ) ೨೦೧೪–೧೫ ಹಾಗೂ ೨೦೧೫–೧೬ ರಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು; (ಯೋಜನೆಗಳಿಗೆ ಸೀಮಿತವಾಗಿ) ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

(ಇ) ಕಾವೇರಿ ನೀರಾವರಿ ವ್ಯಾಪ್ತಿಯಲ್ಲಿ ಹೇಮಾವತಿ ನಾಲಾ ಅಭಿವೃದ್ಧಿ, ಕಾವೇರಿ ನೀರಾವರಿಯ ನಾಲಾ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣವೆಷ್ಟು; ಕಾವೇರಿ ನಾಲಾ (Canal development) ಕಾಮಗಾರಿಯಲ್ಲಿ ಸಾಕಷ್ಟು ಕಳಪೆ ಕಾಮಗಾರಿ ನಡೆದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಳಪೆ ಕಾಮಗಾರಿ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು;

(ಈ) ನಾಗಮಂಗಲ ಕೆರೆಗಳಿಗೆ ನೀರು ಬಿಡದೆ ಕೆರೆಗಳು ಬತ್ತಿ ಹೋಗಿದ್ದು ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಕೈ ಬಿಡಲಾಗಿದೆಯೇ; ಹಾಗಿದ್ದಲ್ಲಿ, ಇದರಿಂದಾಗಿ ಜನ ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ನುಗು ವನ್ಯದಾಮ ಅರಣ್ಯ ವಲಯ ಅಭಿವೃದ್ಧಿ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೨೧ (೨೫೭೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಜಿಲ್ಲೆ, ನುಗು ವನ್ಯಧಾಮ (ವೈಲ್ಡ್‌ಲೈಫ್) ಅರಣ್ಯ ವಲಯ ಅಭಿವೃದ್ಧಿಗೆ ಅಥವಾ ಅಲ್ಲಿನ ಪ್ರಾಣಿಗಳ ಪಾಲನೆಗಾಗಿ ಮತ್ತು ಕಾಡಿನ ರಕ್ಷಣೆಗಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಯಾವ ಯಾವ ಯೋಜನೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಸದ್ಯ ಈ ವ್ಯಾಪ್ತಿಯ ಕಾಡಿನಲ್ಲಿ ಯಾವುದಾದರೂ ಅಭಿವೃದ್ಧಿ ಕಾರ್ಯಗಳು ಅಥವಾ ಕಾಮಗಾರಿಗಳು ನಡೆಯುತ್ತಿದ್ದಲ್ಲಿ ಅದರ ಭಾವಚಿತ್ರಗಳ ಸಹಿತ ಮಾಹಿತಿಯನ್ನು ಒದಗಿಸುವುದು;

(ಆ) ಜನವರಿ ೨೦೧೫ರಿಂದ ಇಲ್ಲಿಯವರೆವಿಗೂ ಅರಣ್ಯ ಅಪರಾಧ ಕಾಯ್ದೆಯಡಿ ಈ ವಲಯದಲ್ಲಿ ಎಷ್ಟು ಅಪರಾಧ ಮೊಕದ್ದಮೆಗಳು ದಾಖಲಾಗಿವೆ; ಮೊಕದ್ದಮೆಗಳು ಯಾವ ಹಂತದಲ್ಲಿವೆ ವಿವರ ನೀಡುವುದು;

(ಇ) ಜನವರಿ ೨೦೧೫ ರಿಂದ ಇಲ್ಲಿಯವರೆವಿಗೂ ಇದೆ ವಲಯದ ವ್ಯಾಪ್ತಿಗೆ ಬರುವ ರೈತರ ಜಮೀನುಗಳಲ್ಲಿ ಯಾವ ಯಾವ ರೈತನ ಎಷ್ಟೆಷ್ಟು ಜಮೀನುಗಳು ಯಾವ ದಿನದಂದು ನಾಶವಾಗಿವೆ; ನಷ್ಟಕ್ಕೊಳಗಾದ ರೈತರಿಗೆ ಯಾವ ದಿನದಂದು ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ? (ವಿವರ ನೀಡುವುದು)

## ನಾಗಮಂಗಲ ವ್ಯವಸಾಯಕ್ಕೆ ಬೇಕಾಗಿರುವ ನೀರಿನ ಪ್ರಮಾಣ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೨೨ (೨೫೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಾಗಮಂಗಲಕ್ಕೆ ವ್ಯವಸಾಯಕ್ಕೆಂದು ಬಿಡುಗಡೆ ಮಾಡಬೇಕಾಗಿರುವ ನೀರಿನ ಪ್ರಮಾಣವೆಷ್ಟು; ಕುಡಿಯುವ ನೀರಿನ ಪ್ರಮಾಣವೆಷ್ಟು;

(ಆ) ರಾಮನಗರ ಜಿಲ್ಲೆಯ ಮಂಚನಬೆಲೆ ಡ್ಯಾಂಗೆ ಹೇಮಾವತಿ ನೀರನ್ನು ತರುವ ಯೋಜನೆ ಸರ್ಕಾರದ ಮುಂದಿದೆಯೇ; ಇದಕ್ಕಾಗಿ ಯೋಜನೆ ರೂಪಿಸಲಾಗಿದೆಯೇ; (ಮಾಹಿತಿ ನೀಡುವುದು)

(ಇ) ೨೦೧೫–೧೬ ರಲ್ಲಿ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ಕೇಂದ್ರದಿಂದ ಬಿಡುಗಡೆ ಮಾಡಿದ ಹಣವೆಷ್ಟು; ಯಾವ ಯಾವ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿದೆ;

(ಈ) ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿದ ಹಣವೆಷ್ಟು? (ಮಾಹಿತಿ ನೀಡುವುದು)

## ಯುವ ನೀತಿ ಅನುಷ್ಠಾನ ಯೋಜನೆಗೊಳಿಸುವ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨೩ (೨೧೮೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯುವ ಜನರಿಗೆ ಯುವ ನೀತಿ ಅನುಷ್ಠಾನ ಯೋಜನೆ ಅಡಿಯಲ್ಲಿ ಸರ್ಕಾರವು ತರಬೇತಿ ಹಾಗೂ ಸ್ಪರ್ಧೆಗಳಿಗೆ ಯಾವ ಯಾವ ಮಾರ್ಗಸೂಚಿಗಳನ್ವಯ ಉತ್ತೇಜನ ನೀಡಲಾಗಿದೆ;

(ಆ) ಹಾಗಿದ್ದಲ್ಲಿ, ಗ್ರಾಮೀಣ ಭಾಗದ ಯುವ ಜನರಿಗಾಗಿ ಜಾರಿಗೆ ತರುತ್ತಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಿ ತರಬೇತಿ ನೀಡಲು ಸರ್ಕಾರವು ಖಾಸಗಿ ಸಂಸ್ಥೆಗಳ ಸಹಾಯವನ್ನು ಬಯಸುತ್ತಿರುವುದು ಸರಿಯೇ;

(ಇ) ಹಾಗಿದ್ದಲ್ಲಿ, ಖಾಸಗಿ ಸಂಸ್ಥೆಗಳನ್ನು ಯಾವ ಮಾನದಂಡ ಹಾಗೂ ಶುಲ್ಕದ ಮೇಲೆ ಆಯ್ಕೆ ಮಾಡಿಕೊಳ್ಳುತ್ತಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಜಾರಿಗೊಂಡ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ದೀರ್ಘ ಕಾಲದಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕು ಪತ್ರಗಳನ್ನು ವಿತರಿಸುವ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨೪ (೨೫೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦–೩೦ ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರು ಹಕ್ಕು ಪತ್ರ ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಮನವಿಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಆ ಪೈಕಿ ಹಕ್ಕು ಪತ್ರ ನೀಡಿದ ಹಾಗೂ ನೀಡದಿರುವ ಸಂಖ್ಯೆ ಎಷ್ಟು; ಹಕ್ಕು ಪತ್ರ ನೀಡದಿರಲು ಕಾರಣಗಳೇನು; ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಹಕ್ಕು ಪತ್ರ ವಿತರಿಸಲು ಸರ್ಕಾರದ ಮಾರ್ಗಸೂಚಿಗಳೇನು;

(ಇ) ಹಕ್ಕು ಪತ್ರ ಪಡೆಯಲು ಸರ್ಕಾರಿ ಕಛೇರಿಗಳಿಗೆ ದಿನನಿತ್ಯ ಅಲೆದಾಡುತ್ತಿರುವ ಸಾರ್ವಜನಿಕರ ಸಮಸ್ಯೆ, ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಪೂರ್ಣ ವಿವರ ನೀಡುವುದು)

## ಸರ್ಕಾರದ ವತಿಯಿಂದ ಗೌರವಧನವನ್ನು ಪಡೆಯುತ್ತಿರುವ ಫಲಾನುಭವಿಗಳ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨೫ (೨೫೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾಮಾಜಿಕ ಭದ್ರತೆ ಯೋಜನೆಯಡಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ದೇವದಾಸಿಯವರಿಗೆ ಮಾಸಾಶನ ವಿಧವಾ ವೇತನ, ಅಂಗವಿಕಲರ ಗೌರವಧನ ಹಾಗೂ ಇತರೆ ಗೌರವಧನ ಪಡೆಯುತ್ತಿರುವವರಿಗೆ ಸರ್ಕಾರ ವರ್ಗಾವಾರು ನೀಡುತ್ತಿರುವ ಗೌರವಧನ ಎಷ್ಟು; ಹಾಗೂ ವರ್ಗವಾರು ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು;

(ಆ) ಕಳೆದ ೦೫ ವರ್ಷದಿಂದ ಒಟ್ಟು ವರ್ಗವಾರು, ವಾರ್ಷಿಕವಾರು ಮತ್ತು ಜಿಲ್ಲಾವಾರು ಫಲಾನುಭವಿಗಳ ಮಾಹಿತಿ ನೀಡುವುದು;

(ಇ) ಮೇಲ್ಕಂಡ ಯೋಜನೆಯಡಿ ಒಟ್ಟು ಗೌರವಧನ ಪಡೆಯಲು ಸಲ್ಲಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪುರಸ್ಕೃತಗೊಂಡ ಹಾಗೂ ತಿರಸ್ಕೃತಗೊಂಡ ಅರ್ಜಿಗಳೆಷ್ಟು? (ವರ್ಗವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

## ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨೬ (೨೫೮೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಬಾಲ ಕಾರ್ಮಿಕರುಗಳ ಸ್ಥಿತಿಗತಿ ಕುರಿತಾದ ಅಂಕಿ ಅಂಶಗಳನ್ನು ಒದಗಿಸುವುದು;

(ಆ) ಬಾಲ ಕಾರ್ಮಿಕರುಗಳಿಗೆ ಪುನರ್‌ವಸತಿ ಕಲ್ಪಿಸುವ ದಿಶೆಯಲ್ಲಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು)

(ಇ) ಬಾಲ ಕಾರ್ಮಿಕ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇರುವ ಕಾರ್ಪಸ್ ನಿಧಿ ಮತ್ತು ಅದರ ಬಳಕೆ ಕುರಿತಾದ ಜಿಲ್ಲಾವಾರು ಮಾಹಿತಿ ನೀಡುವುದು;

(ಈ) ಬಾಲ ಕಾರ್ಮಿಕರನ್ನು ಅನಧಿಕೃತವಾಗಿಟ್ಟುಕೊಂಡು ದುಡಿಮೆ ಮಾಡಿಸಿಕೊಳ್ಳುತ್ತಿರುವ ಗಾರ್ಮೆಂಟ್ಸ್ ಹಾಗೂ ಇನ್ನಿತರೆ ಕಾರ್ಖಾನೆಗಳ ಮಾಲೀಕರ ವಿರುದ್ಧ ತೆಗೆದುಕೊಂಡಿರುವ ಕ್ರಮವೇನು?

## ನಾಡ ಕಛೇರಿಗಳಲ್ಲಿ ಅವ್ಯವಹಾರಗಳನ್ನು ತಡೆಗಟ್ಟುವ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೨೭ (೨೫೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ೨೮ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಬರುವ ನಾಡ ಕಛೇರಿಗಳೆಷ್ಟು; ಸದರಿ ನಾಡ ಕಛೇರಿಗಳ ವ್ಯಾಪ್ತಿಗೊಳಪಡುವ ಪ್ರದೇಶ/ವಾರ್ಡುಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ನಾಡ ಕಛೇರಿಗಳಿಗೆ ಅನುಮೋದಿತವಾಗಿರುವ ಹುದ್ದೆಗಳೆಷ್ಟು; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ಹಾಗೂ ಖಾಲಿಯಿರುವ ಹುದ್ದೆಗಳ ಸಂಪೂರ್ಣ ವಿವರವನ್ನು ನೀಡುವುದು;

(ಇ) ಸದರಿ ಕಛೇರಿಗಳಲ್ಲಿ ಹೊರಗುತ್ತಿಗೆ/ಗುತ್ತಿಗೆಯಾಧರದಲ್ಲಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಸಂಪೂರ್ಣ ವಿವರವನ್ನು ನೀಡುವುದು)

(ಈ) ಈ ಕಛೇರಿಗಳಲ್ಲಿ ನಿರಂತವಾಗಿ ಅವ್ಯವಹಾರಗಳು ನಡೆಯುತ್ತಿರುವ ಬಗ್ಗೆ ಸಾರ್ವಜನಿಕರು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಈ ಅವ್ಯವಹಾರಗಳನ್ನು ತಡೆಯಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

## ಕರ್ತವ್ಯ ಲೋಪ ಎಸಗುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೨೮ (೨೫೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳ ವ್ಯಾಪ್ತಿಗೆ ಬರುವ ಪೋಡಿ ದಾಖಲೆಗೆ ಸಂಬಂಧಪಟ್ಟಂತೆ ಹೈಕೋರ್ಟ್ ಆದೇಶಗಳನ್ನು ಅನುಷ್ಠಾನಗೊಳಿಸುವಲ್ಲಿ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು;

(ಆ) ನಿಗದಿತ ಅವಧಿಯಲ್ಲಿ ವ್ಯಾಜ್ಯಗಳನ್ನು ಉದ್ದೇಶ ಪೂರ್ವಕವಾಗಿ ಇತ್ಯರ್ಥಗೊಳಿಸದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು;

(ಇ) ಈ ಸಂಬಂಧ ಭೂ ದಾಖಲೆ ಉಪ ನಿರ್ದೇಶಕರ ಮೇಲೆ ಕರ್ತವ್ಯ ಲೋಪ ಎಸಗಿರುವ ವಿಷಯವು ಸರ್ಕಾರದ ಗಮನದಲ್ಲಿದೆಯೇ; ಆಗಿದ್ದಲ್ಲಿ ಇವರ ವಿರುದ್ಧ ಸರ್ಕಾರದ ಕ್ರಮವೇನು?

## ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಕೊಳವೆ ಬಾವಿಗಳನ್ನು ಕೊರೆಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೨೯ (೨೫೮೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸಿಕೊಡುವ ಯೋಜನೆ ಯಾವ ವರ್ಷದಿಂದ ಜಾರಿಗೆ ಬಂದಿದೆ;

(ಆ) ಯೋಜನೆ ಜಾರಿಗೆ ಬಂದಾಗಿನಿಂದ ಇದುವರೆವಿಗೂ ತಾಲ್ಲೂಕುವಾರು ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

(ಇ) ತಾಲ್ಲೂಕುವಾರು ನಿಗದಿಪಡಿಸಿದ ಗುರಿ ಎಷ್ಟು; ಉದ್ದೇಶಿತ ಗುರಿಯನ್ನು ಸಾಧಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)

## ಮೇಲುಕೋಟೆ ಅಭಯಾರಣ್ಯಗಳ ರಕ್ಷಣೆ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೩೦ (೨೫೬೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೇಲುಕೋಟೆ ಅಭಯಾರಣ್ಯದ ವಿಸ್ತೀರ್ಣ ಎಷ್ಟು; ಈ ಅರಣ್ಯದ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚ ಎಷ್ಟು; ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ವಿವರಗಳನ್ನು ಒದಗಿಸುವುದು)

(ಆ) ಪ್ರಸಕ್ತ ಸಾಲಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು; ಇದಕ್ಕೆ ನಿಗದಿಪಡಿಸಿರುವ ವೆಚ್ಚ ಎಷ್ಟು;

(ಇ) ಈ ಅಭಯಾರಣ್ಯದ ಸಂರಕ್ಷಣೆಗೆ ಮಂಜೂರಾಗಿರತಕ್ಕಂತ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ಖಾಲಿ ಇರುವ ಅಧಿಕಾರಿ ಮತ್ತು ಸಿಬ್ಬಂದಿ ಸಂಖ್ಯೆ ಎಷ್ಟು;

(ಈ) ಈ ಅಭಯಾರಣ್ಯದಲ್ಲಿ ಮರಗಿಡಗಳ ಸಂಖ್ಯೆ ಮತ್ತು ವನ್ಯ ಪ್ರಾಣಿಗಳ ಸಂಖ್ಯೆ ಕಡಿಮೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಅಭಯಾರಣ್ಯದ ಗಡಿಯನ್ನು ಗುರುತಿಸಿ ಅತಿಕ್ರಮಣವನ್ನು ತಡೆಯಲು ಪೂರ್ಣವಾಗಿ ತಂತಿ ಬೇಲಿ ನಿರ್ಮಿಸುವ ಕಾರ್ಯಕ್ರಮ ಕೈಗೊಳ್ಳಲಾಗುವುದು?

## ಅರಣ್ಯ ಇಲಾಖೆಗೆ ಸಿಬ್ಬಂದಿಗಳನ್ನು ನೇಮಿಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೩೧ (೨೫೯೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು;

(ಆ) ಖಾಲಿ ಇರುವ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು;

(ಇ) ಯಾವ ಕಾಲಮಿತಿಯೊಳಗೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು; ಈ ಸಿಬ್ಬಂದಿಗಳ ಕೊರತೆಯಿಂದ ವನ್ಯಮೃಗಗಳ ರಕ್ಷಣೆಗೆ ತೊಡಕು ಉಂಟಾಗುವುದಿಲ್ಲವೇ?

## ಕೊಳವೆ ಬಾವಿಗಳನ್ನು ಕೊರೆಸಿ ವಿದ್ಯುತ್ ಸಂಪರ್ಕವನ್ನು ಒದಗಿಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೩೨ (೨೫೯೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಣ್ಣ ನೀರಾವರಿ ಇಲಾಖೆವತಿಯಿಂದ ಗಂಗಾಕಲ್ಯಾಣ ಯೋಜನೆಯಡಿ ಬಡ ರೈತರಿಗೆ ಕೊರೆಸಲಾಗಿರುವ ಕೊಳವೆ ಬಾವಿಗಳಿಗೆ ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣವೇನು;

(ಆ) ಸದರಿ ಫಲಾನುಭವಿಗಳ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಯಾವ ಕಾಲಮಿತಿಯಲ್ಲಿ ಕಲ್ಪಿಸಲಾಗುವುದು;

(ಇ) ೨೦೧೫-೧೬ನೇ ಸಾಲಿನಲ್ಲಿ ಇನ್ನೂ ಹೆಚ್ಚಿನ ಫಲಾನುಭವಿಗಳಿಗೆ ಈ ಯೋಜನೆಯಡಿ ಕೊಳವೆ ಬಾವಿ ಕೊರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಈ) ಕೆರೆತುಂಬುವ ಯೋಜನೆಯಡಿ ಹಮ್ಮಿಕೊಳ್ಳುವ ವಿಶೇಷ ಕಾರ್ಯಕ್ರಮಗಳೇನು? (ವಿವರ ನೀಡುವುದು)

## ಕಳಸ ಬಂಡೂರಿ ಯೋಜನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-**

೨೧೩೩ (೨೬೦೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳಸಾ-ಬಂಡೂರಿ ಯೋಜನೆ ಅನುಷ್ಟಾನ ಕುರಿತಂತೆ, ಗೋವಾ ರಾಜ್ಯದ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಜೊತೆ ಸೌಹಾರ್ದಯುತ ಮಾತುಕತೆಯನ್ನು ನಡೆಸಲಾಗಿದೆಯೇ;

(ಆ) ನಡೆಸಿದ್ದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಜೊತೆಗೆ ನಡೆಸಿರುವ ಮಾತುಕತೆಯ ಮತ್ತು ಭರವಸೆಗಳ ಪ್ರತ್ಯೇಕ ವಿವರ ನೀಡುವುದು;

(ಇ) ನಡೆಸಿಲ್ಲವಾದಲ್ಲಿ ಕಾರಣವೇನು; (ವಿವರ ನೀಡುವುದು)

(ಈ) ಈ ಸಾಲಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ನಡೆಸಿರುವ ಪ್ರಯತ್ನಗಳು ಮತ್ತು ಅದರಿಂದಾದ ಫಲಶೃತಿಗಳ ವಿವರ ನೀಡುವುದು?

## ಕಾಮಗಾರಿಗಳ ಅನುಷ್ಠಾನದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-**

೨೧೩೪ (೨೫೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ನೀರಾವರಿ ನಿಗಮದಡಿಯಲ್ಲಿ ಯಾವ–ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ;

(ಆ) ಅವುಗಳ ಕಾಮಗಾರಿ ಶೇಕಡಾ ಎಷ್ಟು ಪೂರ್ಣಗೊಂಡಿರುತ್ತದೆ; (ವಿವರ ನೀಡುವುದು)

(ಇ) ಅವುಗಳ ಅಂದಾಜು ವೆಚ್ಚ ಬಿಡುಗಡೆಯಾಗಿರುವ ಹಣ, ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಲಾಗಿರುವ ಅವಧಿ ಕುರಿತು? (ವಿವರ ನೀಡುವುದು)

## ಕಸ್ತೂರಿ ರಂಗನ್ ವರದಿ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೧೩೫ (೨೫೯೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಸ್ತೂರಿ ರಂಗನ್ ವರದಿ ಕುರಿತು ಕೆಲವು ಸಲಹೆಗಳನ್ನು ಕೈಬಿಡುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿರುವುದು ನಿಜವೇ; (ವಿವರ ನೀಡುವುದು)

(ಆ) ಸದರಿ ವರದಿಯಲ್ಲಿನ ಕೈಬಿಡುವ ಕೋರಿಕೆಗಳನ್ನು ಹೊರತು ಪಡಿಸಿ, ಬೇರಾವ ಸಲಹೆಗಳನ್ನು ಕರ್ನಾಟಕ ಸರ್ಕಾರವು ಒಪ್ಪಿರುತ್ತದೆ. (ಪ್ರಮುಖವಾದವುಗಳ ಕುರಿತು ವಿವರ ನೀಡುವುದು)

(ಇ) ಕರ್ನಾಟಕ ಸರ್ಕಾರದ ಬೇಡಿಕೆಗಳನ್ನು ಕುರಿತು ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆ ಬಂದಿದೆಯೇ; (ವಿವರ ನೀಡುವುದು)

(ಈ) ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರದ ಬೇಡಿಕೆಗಳನ್ನು ತಿರಸ್ಕರಿಸಿದ್ದಲ್ಲಿ, ಅದಕ್ಕೆ ಯಾವ ರೀತಿಯ ಕಾರಣಗಳನ್ನು ನೀಡಲಾಗಿದೆ? (ವಿವರ ನೀಡುವುದು)

## ನೇಕಾರರ ಶ್ರೇಯೋಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವ ಬಗ್ಗೆ

**ಡಾ॥ ಜೈಮಾಲಾ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೨೧೩೬ (೨೬೦೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದಿಂದ ರೂಪಿಸಿರುವ ಯೋಜನೆಗಳು ಯಾವುವು;

(ಆ) ಯೋಜನೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿ ಇತ್ಯಾದಿಗಳ ಪರಿಶೀಲನೆಗಾಗಿ ಸರ್ಕಾರದಿಂದ ಸಮಿತಿಯನ್ನು ರಚಿಸಲಾಗಿದೆಯೇ;

(ಇ) ಇಲ್ಲದಿದ್ದಲ್ಲಿ, ಸಮಿತಿಯನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

## ನಶಿಸುತ್ತಿರುವ ಜವಳಿ ಉದ್ಯಮ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೩೭ (೨೬೦೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜವಳಿ ಉದ್ಯಮವು ನಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಉದ್ಯಮವು ನಶಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆ ತೀವ್ರತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ನಿರುದ್ಯೋಗ ಸಮಸ್ಯೆ ಪರಿಹಾರದ ಕಾರ್ಯಕ್ರಮಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು)

## ಅಪೂರ್ಣಗೊಂಡಿರುವ ನೀರಾವರಿ ಯೋಜನೆಗಳು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೩೮ (೨೬೦೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಪೂರ್ಣಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಾವುವು; ಈ ಯೋಜನೆಗಳು ಅಪೂರ್ಣಗೊಳ್ಳಲು ಕಾರಣಗಳೇನು; (ಯೋಜನಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಅಪೂರ್ಣಗೊಂಡಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಇದಕ್ಕೆ ಅವಶ್ಯಕತೆಯಿರುವ ಹಣವೆಷ್ಟು; ಮತ್ತು ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಅರಣ್ಯ ಪ್ರದೇಶದ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–**

೨೧೩೯ (೨೬೧೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶ ಒತ್ತುವರಿ ಪ್ರಕರಣಗಳು ದಾಖಲಾಗಿವೆಯೇ;

(ಆ) ಹಾಗಿದ್ದಲ್ಲಿ, ದಾಖಾಲಾದ ಪ್ರಕರಣಗಳು ಎಷ್ಟು; ಎಷ್ಟು ಎಕರೆ ಅರಣ್ಯ ಪ್ರದೇಶ ಒತ್ತುವರಿ ಅಗಿದೆ; (ವಿವರ ನೀಡುವುದು)

(ಇ) ಪಕ್ಕದ ತೆಲಂಗಾಣ ರಾಜ್ಯ ವ್ಯಾಪ್ತಿಯ ಅರಣ್ಯ ಒತ್ತುವರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಸರ್ಕಾರ ಕೈಗೊಂಡ ಕ್ರಮಗಳೇನು?

## ಹೈದ್ರಾಬಾದ್–ಕರ್ನಾಟಕದ ವಿಶೇಷ ಸ್ಥಾನಮಾನದ ೩೧೭ನೇ ಕಲಂ ಅರ್ಹತಾ ಪತ್ರದ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–**

೨೧೪೦ (೨೬೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ವಿಶೇಷ ಸ್ಥಾನಮಾನದ ೩೭೧ನೇ ಕಲಂ ಅನ್ವಯ ನೀಡಲಾದ ಅರ್ಹತಾ ಪತ್ರ ವಿತರಣೆಯಲ್ಲಿ ತುಂಬಾ ವಿಳಂಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳಿಗೆ ಕಾಲಮಿತಿಯೊಳಗೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಈ ವಿಳಂಬ ನೀತಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವಿಶೇಷ ತಹಶೀಲ್ದಾರ್ ಕಛೇರಿಗಳ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–**

೨೧೪೧ (೨೬೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ವಿಶೇಷ ತಹಶೀಲ್ದಾರ್ ಕಛೇರಿಗಳು ಎಷ್ಟು;

(ಆ) ಈ ಕಛೇರಿಗಳಿಗೆ ಮಂಜೂರಾದ ಹುದ್ದೆಗಳೆಷ್ಟು; ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

# ಹೈದ್ರಾಬಾದ್–ಕರ್ನಾಟಕದ ಪ್ರದೇಶದಲ್ಲಿರುವ ಬಾಲ ಕಾರ್ಮಿಕರ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–**

೨೧೪೨ (೨೬೧೪) ಮಾನ್ಯ ಕಾರ್ಮಿಕರ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬಾಲ ಕಾರ್ಮಿಕರು ಹೆಚ್ಚಾಗಿ ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ೨೦೧೪–೧೫ನೇ ಸಾಲಿನಲ್ಲಿ ಎಷ್ಟು ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ;

(ಇ) ಬಾಲ ಕಾರ್ಮಿಕರ ಪದ್ಧತಿ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

## ರಾಜ್ಯದಲ್ಲಿ ಎನ್.ಸಿ.ವಿ.ಟಿ ಹಾಗೂ ಎಸ್.ಸಿ.ವಿ.ಟಿ. ಮಾದರಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೧೪೩ (೨೬೨೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಐ.ಟಿ.ಐ ಕಾಲೇಜುಗಳಲ್ಲಿ ಎಸ್.ಸಿ.ವಿ.ಟಿ. ಮಾದರಿ ಅಳವಡಿಸಿಕೊಂಡಿರುವ ಕಾಲೇಜುಗಳ ಸಂಖ್ಯೆ ಎಷ್ಟು ; ಎನ್.ಸಿ.ವಿ.ಟಿ. ಮಾದರಿಯನ್ನು ಅಳವಡಿಸಿಕೊಂಡಿರುವ ಕಾಲೇಜುಗಳು ಎಷ್ಟು ;

(ಆ) ಎನ್.ಸಿ.ವಿ.ಟಿ. ಹಾಗೂ ಎಸ್.ಸಿ.ವಿ.ಟಿ. ಎರಡರಲ್ಲಿರುವ ವ್ಯತ್ಯಾಸ, ಪಠ್ಯಕ್ರಮ, ಶೈಕ್ಷಣಿಕ ವರ್ಷ, ಪರೀಕ್ಷೆ ಪ್ರವೇಶಾತಿ ಶುಲ್ಕ ಸಂರಚನೆಯ ತುಲನಾತ್ಮಕ ವಿವರ ನೀಡುವುದು ;

(ಇ) ಎಸ್.ಸಿ.ವಿ.ಟಿ ಮಾದರಿಯಲ್ಲಿರುವ ಐ.ಟಿ.ಐ ಶಿಕ್ಷಣ ಗುಣಮಟ್ಟದ ಕೊರತೆ, ಐ.ಟಿ.ಐ ಶಿಕ್ಷಣದ ಅಧಃಪತನದತ್ತ ಕೊಂಡ್ಯೊಯುತ್ತಿದೆ ಎನ್ನುವ ಕೂಗು ನಿಜವೇ ; ಎಸ್.ಸಿ.ವಿ.ಟಿ ಗುಣಮಟ್ಟದ ಸುಧಾರಣೆಗೆ ಸರ್ಕಾರದ ಕ್ರಮವೇನು ?

## ರಾಜ್ಯದಲ್ಲಿನ ಐ.ಟಿ.ಐ ಕಾಲೇಜುಗಳಿಗೆ ಅನುದಾನ ಕೊಡುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೧೪೪ (೨೬೨೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಐ.ಟಿ.ಐ ಕಾಲೇಜುಗಳಿಗೆ ಅನುದಾನ ಕೊಡುವ ಕುರಿತು ಸರ್ಕಾರದ ನಿಲುವೇನು;

(ಆ) ಈಗ ಅನುದಾನಕ್ಕೊಳಪಟ್ಟ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು ;

(ಇ) ಅನುದಾನಕ್ಕೊಳಪಡಬೇಕಾದ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು;

(ಈ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಅನುದಾನ, ಅನುದಾನ ರಹಿತ, ಸರ್ಕಾರಿ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು ? (ಹೆಸರು ಮತ್ತು ವಿಳಾಸ ಸಹಿತ ಸಂಪೂರ್ಣ ವಿವರ ನೀಡುವುದು)

## ಕ್ರೀಡಾಂಗಣಗಳ ಹಾಗೂ ಕ್ರೀಡಾಂಗಣಗಳ ಸಿಬ್ಬಂದಿಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೧೪೫ (೨೬೨೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಕ್ರೀಡಾಂಗಣಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಆ ಕ್ರೀಡಾಂಗಣದಲ್ಲಿ ಒದಗಿಸಿರುವ ಮೂಲಭೂತ ಸೌಕರ್ಯಗಳಾವುವು; ( ಕ್ರೀಡಾಂಗಣವಾರು ವಿವರ ನೀಡುವುದು)

(ಇ) ಕ್ರೀಡಾಂಗಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಸದರಿ ಹುದ್ದೆಗಳು ಖಾಯಂ/ಅರೆಕಾಲಿಕ/ಹೊರಗುತ್ತಿಗೆಯೇ ಹಾಗೂ ಅವರ ವೇತನ ಶ್ರೇಣಿ, ಕೊಡಲಾಗುತ್ತಿರುವ ವಾರ್ಷಿಕ ನಿರ್ವಹಣಾ ಅನುದಾನಗಳ ಸಂಪೂರ್ಣ ವಿವರ ನೀಡುವುದು)

(ಈ) ಆಯಾ ಕ್ರೀಡಾಂಗಣದ ಸ್ಥಳೀಯ ಸ್ವಂತ ಆದಾಯ ಹಾಗೂ ವ್ಯಯದ ಸಂಪೂರ್ಣ ವಿವರ ನೀಡುವುದು ;

(ಉ) ಪ್ರತಿ ಕ್ರೀಡಾಂಗಣಕ್ಕೆ ರಚಿಸಿರುವ ಕ್ರೀಡಾಂಗಣ ಸಮಿತಿಯಲ್ಲಿರುವವರ ಹೆಸರು, ಹುದ್ದೆ, ಇತ್ಯಾದಿ ವಿವರಗಳನ್ನು ನೀಡುವುದು ?

## ಐ.ಟಿ.ಐ. ಶಿಕ್ಷಣದ ಥಾಮಸ್ ವರದಿ ಜಾರಿಗೊಳಿಸಿರುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೧೪೬ (೨೬೨೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ "ಥಾಮಸ್ ವರದಿಯ"ಯನ್ನು ಜಾರಿಗೊಳಿಸಲಾಗಿದ್ದು ಯಾವಾಗ ; ಸರ್ಕಾರದ ಆದೇಶದ (G.O.) ಪ್ರತಿ ನೀಡುವುದು ;

(ಆ) ಇದರನ್ವಯ ಅನುದಾನಿತ ಐ.ಟಿ.ಐ ಕಾಲೇಜಿನಲ್ಲಿರುವ ಸಿಬ್ಬಂದಿಗೆ ನೀಡಿರುವ ಸೌಲಭ್ಯಗಳು ಯಾವುವು ; ನಿವೃತ್ತಿ ಸೌಲಭ್ಯಗಳು ಯಾವುವು; ನೀಡದಿದ್ದರೆ ಯಾವಾಗ ನೀಡಲಾಗುವುದು ; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ಪೂರ್ಣಗೊಳ್ಳುವುದು ?

## ಐ.ಟಿ.ಐ. ಕಾಲೇಜುಗಳ ಸಿಬ್ಬಂದಿಗಳ ವೇತನದ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):–**

೨೧೪೭ (೨೬೨೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಅನುದಾನಿತ ಐ.ಟಿ.ಐ ಕಾಲೇಜುಗಳಲ್ಲಿರುವ ಸಿಬ್ಬಂದಿ ವರ್ಗದವರಿಗೆ ಪ್ರತಿ ತಿಂಗಳು ಸಂಬಳವು ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೦೧ ವರ್ಷದಲ್ಲಿ (೦೧–೦೪–೨೦೧೪ ರಿಂದ ೦೧–೧೧–೨೦೧೫ರವರೆಗೆ) ಯಾವ ತಿಂಗಳ ಸಂಬಳ ಯಾವ ದಿನಾಂಕದಂದು ನೀಡಲಾಗಿದೆ? (ವಿವರ ನೀಡುವುದು)

## ಸವಡೆಗಳು (ನೀರುಗಂಟಿ) ಇವರಿಗೆ ವೇತನ ನಿಗಧಿಪಡಿಸಿರುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೪೮ (೨೪೫೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸವಡೆಗಳು (ನೀರುಗಂಟಿ) ಸಂಖ್ಯೆ ಎಷ್ಟು ; ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ ; ಇವರುಗಳಿಗೆ ನೀಡುತ್ತಿರುವ ವೇತನ ಎಷ್ಟು ;

(ಆ) ಹಾಗಿದ್ದಲ್ಲಿ, ಈ ನೌಕರರುಗಳಿಗೆ E.S.I., E.P.F. ಹಾಗೂ ವಿಮಾ ಸೌಲಭ್ಯಗಳನ್ನು ಒಳಪಡಿಸಲಾಗಿದೆಯೇ ;

(ಇ) ಈ ನೌಕರರುಗಳನ್ನು ಖಾಯಂಗೊಳಿಸಲಾಗುವುದು ಯಾವಾಗ ?

## ಎಸ್.ಸಿ./ಎಸ್.ಟಿ.ಗಳ ಸ್ಮಶಾನಕ್ಕಾಗಿ ಜಮೀನನ್ನು ವಶಪಡಿಸಿಕೊಂಡಿರುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೪೯ (೨೬೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ರಿಂದೀಚೆಗೆ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಸ್ಮಶಾನಗಳಿಗಾಗಿ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

(ಆ) ಎಲ್ಲೆಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ; ಯಾವ ಯಾವ ಊರುಗಳಲ್ಲಿ ಸ್ಮಶಾನಕ್ಕಾಗಿ ಇಲಾಖೆಯಿಂದ ಜಮೀನನ್ನು ಒದಗಿಸಲಾಗಿದೆ ;

(ಇ) ೨೦೧೪–೧೫ನೇ ಸಾಲಿನಿಂದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಇಲಾಖೆ ವತಿಯಿಂದ ನಿವೇಶನಗಳನ್ನು ಹಂಚಲು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ;

(ಈ) ಕಳೆದ ೨ ವರ್ಷಗಳಿಂದ ಯಾವ ಯಾವ ಊರುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ನಿವೇಶನ ನೀಡಲಾಗಿದೆ ?

## ಎತ್ತಿನಹೊಳೆ ಯೋಜನೆ ಅನುಷ್ಠಾನ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೫೦ (೨೬೩೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎತ್ತಿನಹೊಳೆ ಯೋಜನೆಗಾಗಿ ೨೦೧೫-೧೬ನೇ ಸಾಲಿನಲ್ಲಿ ನಿಗಧಿಪಡಿಸಲಾಗಿದ್ದ ಹಣ ಎಷ್ಟು ; ಖರ್ಚಾಗಿರುವ ಹಣ ಎಷ್ಟು ;

(ಆ) ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ; ಪ್ರಸ್ತುತ ಯೋಜನೆಯ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ ;

(ಇ) ಈ ಯೋಜನೆಗಾಗಿ ರೈತರಿಂದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ;

(ಈ) ಹಾಗಿದ್ದಲ್ಲಿ, ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸೂಕ್ತ ಪರಿಹಾರ ನೀಡಲಾಗಿದೆಯೇ ; ನೀಡಲಾಗಿದ್ದಲ್ಲಿ ಪರಿಹಾರದ ಮೊತ್ತ ಎಷ್ಟು ? (ರೈತರ ಹೆಸರು ಸಹಿತ ಜಮೀನಿನ ವಿಸ್ತೀರ್ಣ ಹಾಗೂ ಪರಿಹಾರದ ಮೊತ್ತದ ವಿವರ ನೀಡುವುದು)

## ವಿಜಯಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೫೧ (೨೬೩೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಮೀನು ಸಾಕಾಣಿಕೆಯ ಸರ್ಕಾರಿ ಹೊಂಡಗಳಿವೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಅವಳಿ ಜಿಲ್ಲೆಗಳ ಯಾವ ಯಾವ ಕೆರೆ ಮತ್ತು ಜಲಾಶಯಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತದೆ. ಇದರಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು ; (ವಿವರ ನೀಡುವುದು)

(ಇ) ಅವಳಿ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಮೀನು ಸಾಕಾಣಿಕೆಯ ಸಹಕಾರ ಸಂಘಗಳಿವೆ ; ಅವು ಮೀನುಗಾರರಿಗೆ ಒದಗಿಸುವ ಸೌಕರ್ಯಗಳಾವುವು?

## ಏತ ನೀರಾವರಿ ಬಗ್ಗೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೧೫೨ (೨೬೩೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ನೇ ಸಾಲಿನಲ್ಲಿ ಬಾಗಲಕೋಟೆ ಮತ್ತು ವಿಜಯಾಪುರ ಜಿಲ್ಲೆಗಳಲ್ಲಿ ಎಷ್ಟು ಏತ ನೀರಾವರಿಗಳನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬಾಗಲಕೋಟೆ ಮತ್ತು ವಿಜಯಾಪುರ ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳು ಬಂದಿವೆ ; ಯಾವ ಯಾವ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ; (ವಿವರ ನೀಡುವುದು)

(ಇ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಏತ ನೀರಾವರಿಗಳೆಷ್ಟು ; ನಿಷ್ಕ್ರಿಯಗೊಂಡಿರುವ ಏತ ನೀರಾವರಿಗಳೆಷ್ಟು ? (ವಿವರ ನೀಡುವುದು)

## ದೇಸಿ ಕ್ರೀಡೆಗಳನ್ನು ಉತ್ತೇಜಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೫೩ (೨೬೩೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮೀಣ ಭಾಗದ ಯುವ ಜನರಲ್ಲಿ ಕ್ರೀಡಾ ಪ್ರವೃತ್ತಿಯನ್ನು ಉತ್ತೇಜಿಸಲು ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ;

(ಆ) ಮುಖ್ಯವಾಗಿ ಗ್ರಾಮೀಣ ದೇಸಿ ಕ್ರೀಡೆಯಾದ ಕುಸ್ತಿಯನ್ನು ಪೋಷಿಸಲು ಗರಡಿ ಮನೆಗಳಿಗೆ ಸರ್ಕಾರದ ವತಿಯಿಂದ ಅನುದಾನ ನೀಡಲಾಗುತ್ತಿದೆಯೇ ;

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ಗರಡಿ ಮನೆಗಳಿವೆ ಎಂದು ಅಂದಾಜಿಸಲಾಗಿದೆ; ಹಾಗೂ ಪ್ರತಿ ಗರಡಿ ಮನೆಗೆ ಸರ್ಕಾರದ ವತಿಯಿಂದ ಪ್ರತಿವರ್ಷ ಎಷ್ಟು ಅನುದಾನ ನೀಡಲಾಗುತ್ತಿದೆ ?

## ಚಚಡಿ–ಮುರಗೋಡ ಏತ ನೀರಾವರಿಯ ಕುರಿತು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೫೪ (೨೬೩೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಚಡಿ–ಮುರಗೋಡ ಏತ ನೀರಾವರಿ ಯೋಜನೆಯು ಈಗ ಯಾವ ಹಂತದಲ್ಲಿರುತ್ತದೆ ; (ವಿವರ ನೀಡುವುದು)

(ಆ) ಸದರಿ ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದ್ದು ಯಾವಾಗ ; ಈ ಯೋಜನೆಯ ಒಟ್ಟು ಅಂದಾಜು ಮೊತ್ತವೆಷ್ಟು ; ಮಂಜೂರಾತಿ ನೀಡಲಾಗಿರುವ ಮೊತ್ತ ಎಷ್ಟು ;

(ಇ) ಈ ಯೋಜನೆಯನ್ನು ಕೈಗೊಳ್ಳುವುದರಿಂದ ಯಾವ ಯಾವ ಹಳ್ಳಿಗಳ, ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುವುದು ? (ವಿವರ ನೀಡುವುದು)

## ಕಳಸಾ ಬಂಡೂರಿ ನಾಲಾ ಮತ್ತು ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸಿ ಕುಡಿಯುವ ನೀರು ಹಾಗೂ ನೀರಾವರಿಗೆ ನೀರು ಲಭ್ಯ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೫೫ (೨೬೩೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳಸಾ–ಬಂಡೂರಿ ನಾಲಾ ತಿರುವು ಯೋಜನೆಯಿಂದ ಮತ್ತು ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಕೂಡಿಸುವುದರಿಂದ ಎಷ್ಟು ಟಿ.ಎಂ.ಸಿ. ನೀರು ರಾಜ್ಯಕ್ಕೆ ಸಿಗುವುದು ;

(ಆ) ಈ ಯೋಜನೆ ಕಾರ್ಯಗತ ಮಾಡುವುದರಿಂದ ಯಾವ ಯಾವ ತಾಲ್ಲೂಕುಗಳಿಗೆ ಕುಡಿಯುವ ನೀರಿನ ಅನುಕೂಲವಾಗುವುದು ;

(ಇ) ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಈ) ಈ ಪ್ರಕರಣದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಸರ್ಕಾರಗಳ ನಿಲುವೇನು ; (ವಿವರ ನೀಡುವುದು)

(ಉ) ಈ ಯೋಜನೆಯಿಂದ ಕರ್ನಾಟಕಕ್ಕೆ ಎಷ್ಟು ಟಿ.ಎಂ.ಸಿ ನೀರು ಬೇಕು ಎಂದು ಸರ್ಕಾರ ಕೇಳುತ್ತಿದೆ ?

## ಅಸಂಘಟಿತ ಕಾರ್ಮಿಕರಿಗೆ ಆರೋಗ್ಯ ವಿಮಾ ಸೌಲಭ್ಯ ಒದಗಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೫೬ (೨೬೩೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಟ್ಟಡ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗೆ ಕೆಲಸದ ಸಂದರ್ಭದಲ್ಲಿ ಅಪಘಾತವಾದಲ್ಲಿ ಯಾವ ರೀತಿ ನೆರವು ನೀಡಲಾಗುತ್ತಿದೆ;

(ಆ) ಇಂತಹ ಅಸಂಘಟಿತ ಕಾರ್ಮಿಕರಿಗೆ ಇ.ಎಸ್.ಐ. ವ್ಯಾಪ್ತಿಗೊಳಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ ; ಇಲ್ಲವಾದಲ್ಲಿ, ಇವರುಗಳನ್ನು ಇ.ಎಸ್.ಐ ವ್ಯಾಪ್ತಿಗೊಳಪಡಿಸಿ, ಇ.ಎಸ್.ಐ ಗುರುತಿನ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಅಸಂಘಟಿತ ಕಾರ್ಮಿಕರಿಗೆ ಇದುವರೆವಿಗೂ ಎಷ್ಟು ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ ; ಈ ಸ್ಮಾರ್ಟ್ ಕಾರ್ಡ್‌ಗಳಿಂದ ಕಾರ್ಮಿಕರು ಯಾವ ಯಾವ ಸೌಲಭ್ಯಗಳನ್ನು ಪಡೆಯಬಹುದು?

## ಬಂಡೀಪುರ ಹುಲಿ ಅಭಯಾರಣ್ಯ ಕಾಡುಗಳಲ್ಲಿ ಶ್ವಾನ ಕಾವಲು ಕಾರ್ಯಾಚರಣೆ ಕೈಗೊಳ್ಳುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೨೧೫೭ (೨೬೩೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಹುಲಿ ಅಭಯಾರಣ್ಯ ಕಾಡುಗಳಲ್ಲಿ ಇನ್ನು ಮುಂದೆ ಪ್ರಾಣಿಗಳನ್ನು ಕಳ್ಳ ಬೇಟೆ ನಡೆಸುವುದನ್ನು ಹಾಗೂ ಮರಗಳ್ಳತನವನ್ನು ತಪ್ಪಿಸಲು ವನ್ಯಜೀವಿ ಅಪರಾಧ ತಡೆಯಲು, ಶ್ವಾನಗಳನ್ನು ಬಳಸಿಕೊಳ್ಳಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ ಸಂಗತಿ ನಿಜವೇ;

(ಆ) ಈ ಶ್ವಾನಗಳಿಗೆ ಮಧ್ಯ ಪ್ರದೇಶದ ಭೂಪಾಲ್‌ನಲ್ಲಿ ತರಬೇತಿ ನೀಡಿ ಬೇರೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಕಳುಹಿಸುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

(ಇ) ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಸ್ತೆಗೆ ಭೂ ಸ್ವಾಧೀನಪಡಿಸಿಕೊಂಡ ಜಮೀನಿನ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೧೫೮ (೨೬೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಕಸಬಾ ಹೋಬಳಿಯ ಬಟವಾಡಿ ಗ್ರಾಮದ ರಿ ಸರ್ವೇ ನಂ ೨೨/೨ ಮತ್ತು ೨೨/೩ ಇವುಗಳನ್ನು ೧೦೦ ಅಡಿ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ;

(ಆ) ಸದರಿ ಜಮೀನುಗಳ ಮಾಲೀಕರು ಯಾರು, ಈ ಜಮೀನುಗಳನ್ನು ಹಾಲಿ ಯಾರು ಅನುಭವಿಸುತ್ತಿದ್ದಾರೆ ;

(ಇ) ಸದರಿ ಜಮೀನುಗಳ ಭೂ ಪರಿವರ್ತನೆ ಹೊಂದಿದೆಯೇ ;

(ಈ) ಹೊಂದಿದ್ದರೆ ವಿವರವಾದ ಮಾಹಿತಿ ನೀಡುವುದು ?

## ಅರಣ್ಯ ಪ್ರವಾಸೋದ್ಯಮ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೧೫೯ (೨೬೪೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯ ವತಿಯಿಂದ ಪರಿಸರ ಪ್ರವಾಸೋಧ್ಯಮ (Eco Tourism)ವನ್ನು ಯಾರ ಸಹಯೋಗದೊಂದಿಗೆ ಯಾವಾಗ ಪ್ರಾರಂಭಿಸಲಾಯಿತು ಮತ್ತು ಯಾವಾಗ ಅನುಷ್ಠಾನಗೊಳಿಸಲಾಯಿತು ;

(ಆ) ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಮತ್ತು ಎಷ್ಟು ಉದ್ಯೋಗವಕಾಶಗಳನ್ನು ಸೃಷ್ಟಿಸಲಾಗಿದೆ ;

(ಇ) ಹಾಲಿ ಸದರಿ ಯೋಜನೆಯು ಜಾರಿಲ್ಲಿದೆಯೇ ?

## ಬಡವರಿಗೆ ಉಚಿತ ನಿವೇಶನ ಹಾಗೂ ಮನೆ ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೧೬೦ (೨೬೪೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಡವರಿಗೆ ಉಚಿತವಾಗಿ ನಿವೇಶನ ಮತ್ತು ಮನೆ ನೀಡುವ ಯೋಜನೆ ಜಾರಿಯಲ್ಲಿದೆಯೆ ;

(ಆ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಾಸಿಸುವ ಬಡವರಿಗೆ ಉಚಿತವಾಗಿ ನಿವೇಶನ ಮತ್ತು ಮನೆ ನೀಡುವ ಸಂಬಂಧ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಜಮೀನನ್ನು ಕಾಯ್ದಿರಿಸಲಾಗಿದೆ ;

(ಇ) ಸದರಿ ಕಾಯ್ದಿರಿಸಿದ ಜಮೀನಿನ ವಿಸ್ತೀರ್ಣಗಳು ಎಷ್ಟು ; (ಜಿಲ್ಲೆ ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯತಿ, ಮತ್ತು ಸರ್ವೇ ನಂ ವಾರು ಮಾಹಿತಿ ಕೊಡುವುದು)

(ಈ) ಸದರಿ ಜಮೀನಿನಲ್ಲಿ ಹಾಲಿ ಅಭಿವೃದ್ಧಿ ಪಡಿಸಿದ ನಿವೇಶನಗಳು ಮತ್ತು ಮನೆಗಳು ಎಷ್ಟು ; ಯಾರ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಲಾಗಿದೆ ; (ವಿವರವಾದ ಮಾಹಿತಿ ಕೊಡುವುದು)

(ಉ) ಇದರಲ್ಲಿ ಬಡವರಿಗೆ ಹಂಚಿಕೆಯಾದ ಮತ್ತು ಹಂಚಿಕೆಯಾಗದ ನಿವೇಶನ ಮತ್ತು ಮನೆಗಳು ಎಷ್ಟು ವಿವರವಾದ ಮಾಹಿತಿ ಕೊಡುವುದು

## ಮಾನವ ಅಭಿವೃದ್ಧಿಯಲ್ಲಿ ಉತ್ತರ ಕರ್ನಾಟಕವು ವಂಚಿತಗೊಂಡಿರುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೬೧ (೨೬೪೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನವ ಅಭಿವೃದ್ಧಿಯಲ್ಲಿ ರಾಜ್ಯದ ಅಭಿವೃದ್ಧಿ ಅಡಕವಾಗಿರುವ ಸತ್ಯಾಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಾರ್ಮಿಕರಲ್ಲಿ ನೈಪುಣ್ಯತೆ, ಸಾಮರ್ಥ್ಯ ಮತ್ತು ಅರಿವು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ;

(ಇ) ಮಾನವ ಅಭಿವೃದ್ಧಿ ನಿಟ್ಟಿನಲ್ಲಿ ಉತ್ತರ ಕರ್ನಾಟಕವು ತೀವ್ರವಾಗಿ ವಂಚಿತಗೊಂಡಿದ್ದು, ಈ ಪ್ರಾದೇಶಿಕ ಅಸಮತೋಲನ ನಿವಾರಿಸುವ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

## ಒಳನಾಡು ಮೀನುಗಾರರ ಕುಟುಂಬಗಳ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೬೨ (೨೬೪೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಒಳನಾಡ ಪ್ರದೇಶಗಳಲ್ಲಿನ ಮೀನುಗಾರರ ಕುಟುಂಬಗಳು ದುಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಇಂತಹ ಮೀನುಗಾರಿಕೆ ಕುಟುಂಬಗಳ ಪರಿಸ್ಥಿತಿ ಸುಧಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ;

(ಇ) ಬೆಳಗಾವಿ, ಶಿವಮೊಗ್ಗ, ಮೈಸೂರು, ಬಳ್ಳಾರಿ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ?

## ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೬೩ (೨೬೪೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಅಸಂಘಟಿತ ಕಾರ್ಮಿಕರು ಭದ್ರತೆ ಇಲ್ಲದೆ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಸಾಮಾಜಿಕ ಭದ್ರತೆ ಒದಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ;

(ಇ) ಕಾರ್ಮಿಕರಿಗೆ ಪ್ಲಂಬಿಂಗ್, ಹಾಸ್ಪಿಟಾಲಿಟಿ, ಪ್ರವಾಸೋದ್ಯಮ ಮುಂತಾದ ಹೊಸಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುವುದೇ ?

## ಅರಣ್ಯ ಮತ್ತು ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೬೪ (೨೬೪೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅರಣ್ಯ ಮತ್ತು ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅರಣ್ಯ ಮತ್ತು ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ;

(ಇ) ಮಲೆನಾಡಿನ ಅರಣ್ಯ ಪ್ರದೇಶಗಳಲ್ಲಿ ಎಷ್ಟು ಪರಿಸರ ಪ್ರವಾಸಿ ರೆಸಾರ್ಟ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ ;

(ಈ) ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಜೊತೆಗೆ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ?

# ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಹಣಿ ಮತ್ತು ಇತರೆ ಕಂದಾಯ ದಾಖಲಾತಿ ಪ್ರಮಾಣ ಪತ್ರ ನೀಡುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೬೫ (೨೫೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಹಣಿ ಪತ್ರಕ್ಕಾಗಿ ರೈತರು ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಿಗೆ ಸಕಾಲಕ್ಕೆ ಪಹಣಿ ಪಡೆಯುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ತಪ್ಪಿಸಲು ಗ್ರಾಮ ಪಂಚಾಯಿತಿಗಳಲ್ಲಿ ಪಹಣಿಯನ್ನು ವಿತರಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆಯೇ ;

(ಆ) ಈ ಬಗ್ಗೆ ಸರ್ಕಾರ ಆಶ್ವಾಸನೆ ನೀಡಿರುವುದು ನಿಜವೇ ; ಹಾಗಿದ್ದಲ್ಲಿ, ಎಂದಿನಿಂದ ಕಾರ್ಯಗತಗೊಳಿಸಲಾಗಿದೆ ಹಾಗೂ ಸರ್ಕಾರಿ ಆದೇಶವಾಗಿದ್ದಲ್ಲಿ, ಆದೇಶದ ಪ್ರತಿಯನ್ನು ಒದಗಿಸುವುದು ;

(ಇ) ಸಾರ್ವಜನಿಕರಿಗೆ ಇನ್ನಷ್ಟು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇ ಆಡಳಿತ ಇಲಾಖೆಯು ಪಂಚಾಯಿತಿ ಮಟ್ಟದಲ್ಲಿ ನಾಗರಿಕ ಸೇವಾ ಕೇಂದ್ರಗಳನ್ನು ತೆರೆದು ಇಲ್ಲಿಯವರೆಗೆ ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಪಹಣಿ ಹಾಗೂ ಇತರೆ ಕಂದಾಯ ದಾಖಲಾತಿಗಳನ್ನು ನೀಡಲಾಗುತ್ತಿದೆ ? (ವಿವರ ನೀಡುವುದು)

(ಈ) ಈ ಪಹಣಿಗಳ ಜೊತೆಗೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಬೇಕಾಗುವ ಜಾತಿ/ಆದಾಯ/ಒಕ್ಕಲುತನ/ಹುಟ್ಟುವಳಿ/ಪತ್ರ ಹಾಗೂ ಇನ್ನಿತರೆ ೩೨ ಬಗೆಯ ಕಂದಾಯ ದಾಖಲಾತಿಗಳ ಪ್ರಮಾಣ ಪತ್ರಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗುತ್ತಿದೆಯೇ ; (ವಿವರ ನೀಡುವುದು)

(ಉ) ಗ್ರಾಮ ಪಂಚಾಯಿತಿಗಳಲ್ಲಿ ಪಹಣಿ ಮತ್ತು ಇತರೆ ಕಂದಾಯ ದಾಖಲಾತಿ ಪ್ರಮಾಣ ಪತ್ರವನ್ನು ನೀಡುವ ಸಲುವಾಗಿ ಕೇಂದ್ರ ಸರ್ಕಾರ ಒ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸಿ ಬ್ರಾಡ್ ಬ್ಯಾಂಡ್ ಸಂಪರ್ಕ ಕಲ್ಪಿಸುವುದಕ್ಕಾಗಿ ೨೦೧೩–೧೪ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು, ಈ ಹಣದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆ ; ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲಿನ ಹಣವೆಷ್ಟು ? (ವಿವರ ನೀಡುವುದು)

## ಸರ್ಕಾರಿ ಜಾಗದಲ್ಲಿ ಮನೆಕಟ್ಟಿದಲ್ಲಿ ಸಕ್ರಮಗೊಳಿಸುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೬೬ (೨೫೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಭೂಮಿಯನ್ನು ಕೊಳ್ಳಲು ಈಗಿರುವ ಆದಾಯದ ಮಿತಿಯನ್ನು ಹೆಚ್ಚಿಸಲಾಗಿದೆಯೇ ; ಈ ಬಗ್ಗೆ ಸರ್ಕಾರದಿಂದ ಹೊರಡಿಸಿರುವ ಆದೇಶದ ಪ್ರತಿಯನ್ನು ಒದಗಿಸುವುದು ;

(ಆ) ಸರ್ಕಾರಿ ಜಾಗದಲ್ಲಿ ಮನೆಕಟ್ಟಿಕೊಂಡಿರುವವರಿಗೆ ಸಕ್ರಮಗೊಳಿಸಿ ಹಕ್ಕು ಪತ್ರ / ಖಾತೆ ಮಾಡಿಕೊಡಲು ಅವಕಾಶ ಮಾಡಿಕೊಡಲಾಗಿದೆಯೇ ; (ವಿವರ ನೀಡುವುದು)

(ಇ) ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಿಕೊಂಡವರಿಗೆ ಸಕ್ರಮಗೊಳಿಸಲಾಗಿದೆ ; ಈ ಬಗ್ಗೆ ವಿಧಿಸಿರುವ ಮೊತ್ತವೆಷ್ಟು ; (ವಿವರ ನೀಡುವುದು)

(ಈ) ಅಕ್ರಮವಾಗಿ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಪ್ರಕ್ರಿಯೆ ಎಂದಿನಿಂದ ಜಾರಿಗೆ ತರಲಾಗಿದೆ ; ಈ ಬಗ್ಗೆ ಸರ್ಕಾರಿ ಆದೇಶ ಹೊರಡಿಸಿದ್ದಲ್ಲಿ ಆದೇಶದ ಪ್ರತಿಯನ್ನು ನೀಡುವುದು ;

(ಉ) ಭೂಪರಿವರ್ತನೆಯಾಗದೆ ಕಂದಾಯ ನಿವೇಶನದಲ್ಲಿ ಗ್ರಾಮಠಾಣ ವ್ಯಾಪ್ತಿಯ ಖಾಸಗಿ ನಿವೇಶನದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಸಕ್ರಮಗೊಳಿಸಲಾಗುವುದೇ ; ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಆದೇಶ ಹೊರಡಿಸಿದರೆ ಆದೇಶದ ಪ್ರತಿ ಒದಗಿಸುವುದು ?

## ಕಾಡು ಪ್ರಾಣಿಗಳಿಂದ ಪ್ರಾಣ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೬೭ (೨೫೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆಗಳಲ್ಲಿ ಕಳೆದ ೨ ವರ್ಷಗಳಿಂದ ಕಾಡುಪ್ರಾಣಿಗಳಾದ ಹುಲಿ ಚಿರತೆ ಆನೆಗಳ ದಾಳಿಗೆ ತುತ್ತಾಗಿ ಸಾವನಪ್ಪಿರುವವರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಾಡು ಪ್ರಾಣಿಗಳ ದಾಳಿಗೆ ಪ್ರಾಣ ಕಳೆದುಕೊಂಡ ಕುಟುಂಬದವರಿಗೆ ಕಳೆದ ೨ ವರ್ಷದಲ್ಲಿ ಸರ್ಕಾರ ನೀಡಿರುವ ಆರ್ಥಿಕ ನೆರವಿನ ಬಗ್ಗೆ ವಿವರ ನೀಡುವುದು ;

(ಇ) ಪ್ರಾಣಿಗಳಿಂದ ಹಾಳಾದ ಬೆಳೆ ಹಾನಿಗೆ ಈ ೨ ಜಿಲ್ಲೆಗಳಲ್ಲಿ ನೀಡಿರುವ ಪರಿಹಾರದ ಮೊತ್ತ ಎಷ್ಟು ; (ವಿವರ ನೀಡುವುದು)

(ಈ) ಈ ಕಾಡು ಪ್ರಾಣಿಗಳಿಂದ ದಾಳಿಗೆ ಒಳಗಾಗಿ ಪ್ರಾಣ ಕಳೆದುಕೊಂಡ ರೈತರಿಗೆ ನೀಡುತ್ತಿರುವ ಪರಿಹಾರದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ; (ವಿವರ ನೀಡುವುದು)

(ಉ) ಈಗ ನೀಡುತ್ತಿರುವ ಬೆಳೆ ಪರಿಹಾರವನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ ? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ಹಸಿರೀಕರಣಕ್ಕೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೨೧೬೮ (೨೬೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಹಸಿರೀಕರಣಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ ; (ವಿವರ ಒದಗಿಸುವುದು)

(ಆ) ನಿಗದಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿ ಎಷ್ಟು ;

(ಇ) ಈವರೆವಿಗೂ ಸಾಧಿಸಲಾಗಿರುವ ಗುರಿ ಎಷ್ಟು ?

## ಕಲಬುರಗಿ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೨೧೬೯ (೨೫೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಕೆರೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಕೆರೆಗಳನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಒತ್ತುವರಿಯಾದ ಕೆರೆಗಳ ಸಂಖ್ಯೆ ಎಷ್ಟು ; ಒತ್ತುವರಿಯುನ್ನು ತೆರವುಗೊಳಿಸಿ, ಅವುಗಳ ವಿಸ್ತೀರ್ಣ ಗುರುತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಒತ್ತುವರಿಯನ್ನು ತೆರವುಗೊಳಿಸಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು ?

# ರಾಜ್ಯದ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೧೭೦ (೨೫೪೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಅರಸುತ್ತಿರುವ ನಿರುದ್ಯೋಗಿಗಳ ಅಂದಾಜು ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, (ಕೌಶಲ್ಯ ಮತ್ತು ಕೌಶಲ್ಯ ರಹಿತ ಉದ್ಯೋಗ ಆಕಾಂಕ್ಷಿಗಳ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ನಿಗದಿತ ವಿದ್ಯಾರ್ಹತೆ ಹೊಂದಿದ್ದೂ ಉದ್ಯೋಗ ದೊರಕದಿರುವ ನಿರುದ್ಯೋಗಿಗಳ ಕುರಿತಾಗಿ ಸರ್ಕಾರ ಯಾವ ಯೋಜನೆಗಳ ಮೂಲಕ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ಒದಿಸುವುದು)

## 'ಚಿಣ್ಣರ ವನದರ್ಶನ' ಯೋಜನೆಯ ಜಾರಿ ಕುರಿತು

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೨೧೭೧ (೨೫೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವನ್ಯಜೀವಿ ಸಂಕುಲ ಸಂರಕ್ಷಣೆ, ಮಾಲಿನ್ಯ ಮುಕ್ತ ಪರಿಸರಕ್ಕೆ ಅರಣ್ಯಗಳ ಉಳಿವು ಅವಶ್ಯಕ ಎಂಬುದರ ಬಗ್ಗೆ ಪ್ರೌಢಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಚಿಣ್ಣರ ವನದರ್ಶನ ಎಂಬ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿರುವುದು ನಿಜವೇ ;

(ಆ) ೨೦೧೫–೧೬ರ ಅವಧಿಯಲ್ಲಿ ಈ ಯೋಜನೆಗೆ ನಿಗದಿಪಡಿಸಿರುವ ಅನುದಾನವೆಷ್ಟು ;

(ಇ) ಇದುವರೆವಿಗೂ ಎಷ್ಟು ಪ್ರೌಢಶಾಲಾ ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆದುಕೊಂಡಿರುತ್ತಾರೆ ? (ವಿವರ ನೀಡುವುದು)

## ಬಾಗಲಕೋಟೆಯ ಕ್ರೀಡಾಂಗಣದ ಬಗ್ಗೆ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೧೭೨ (೨೫೮೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲಾ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಯಾವಾಗ ಅಭಿವೃದ್ಧಿಪಡಿಸುವುದಕ್ಕೆ ಮಂಜೂರಾತಿ ನೀಡಲಾಗುವುದು ?

## ಕೊಳವೆ ಬಾವಿಗಳ ಬಗ್ಗೆ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೧೭೩ (೨೫೮೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ನೇ ಸಾಲಿಗೆ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ಮಂಜೂರಾಗಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಕೊರೆದಿರುವ ಹಾಗೂ ಕೊರೆಯದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ವಿಳಂಬವಾಗಿರುವುದಕ್ಕೆ ಕಾರಣವೇನು ? (ವಿವರ ನೀಡುವುದು)

## ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೆರೆಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೨೧೭೪ (೨೫೮೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಹೂಳು ತೆಗೆದಿರುವ ಕೆರೆಗಳ ಸಂಖ್ಯೆ ಎಷ್ಟು;

(ಆ) ಕಳೆದ ೩ ವರ್ಷಗಳಲ್ಲಿ ಈ ಕೆರೆಗಳಿಂದ ಮೀನು ಸಾಗಾಣಿಕೆಯಲ್ಲಿ ಟೆಂಡರ್ ಮೂಲಕ ಬಂದಿರುವ ಹಣ ಎಷ್ಟು? (ವಿವರ ನೀಡುವುದು)

## ಮುಸ್ಲಿಂ ಸಮುದಾಯದವರಿಗೆ ರುದ್ರ ಭೂಮಿಗಾಗಿ ಸ್ಥಳ ನೀಡಿದ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೨೧೭೫ (೨೫೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫ ವರ್ಷಗಳಿಂದ ರಾಜ್ಯದ ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮುಸ್ಲಿಂ ಸಮುದಾಯದವರು ರುದ್ರ ಭೂಮಿಗಾಗಿ ಅರ್ಜಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಯಾವ ಹಂತದಲ್ಲಿ ಇದೆ ;

(ಆ) ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಯಾವ ಯಾವ ಜಿಲ್ಲೆಗಳಿಗೆ ಅನುಮತಿ ನೀಡಿ ಮುಸ್ಲಿಂ ಸಮುದಾಯದವರಿಗೆ ರುದ್ರ ಭೂಮಿಗಾಗಿ ಜಾಗವನ್ನು ನೀಡಲಾಗಿದೆ ಹಾಗೂ ಬಾಕಿ ಉಳಿದ ಅರ್ಜಿಗಳಿಗೆ ಯಾವಾಗ ಮಂಜೂರು ಮಾಡಲಾಗುವುದು ; (ವಿವರವಾದ ಮಾಹಿತಿ ನೀಡುವುದು)

(ಇ) ದಾವಣಗೆರೆ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮಗಳಿಗೆ ಮುಸ್ಲಿಂ ರುದ್ರ ಭೂಮಿಗಾಗಿ ಜಾಗ ನೀಡಲಾಗಿದೆ ? (ವಿವರ ನೀಡುವುದು)

## ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆ ಗ್ರಾಮ ಲೆಕ್ಕಾಧಿಕಾರಿಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೨೧೭೬ (೨೫೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು ;

(ಆ) ಈ ಗ್ರಾಮ ಲೆಕ್ಕಾಧಿಕಾರಿಗಳ ಯಾವ ದಿನಾಂಕ ಹುದ್ದೆಗೆ ಸೇರಿದ್ದಾರೆ ಹಾಗೂ ಇವರುಗಳಿಗೆ ಬಡ್ತಿಯನ್ನು ಯಾವ ದಿನಾಂಕಗಳಿಂದ ನೀಡಿದೆ (ಮೀಸಲಾತಿಯಂತೆ ವಿವರ ನೀಡುವುದು) ಬಡ್ತಿಯನ್ನು ನೀಡದಿರುವುದಕ್ಕೆ ಕಾರಣವೇನು ;

(ಇ) ಕಂದಾಯ ಇಲಾಖೆಯ ನೀತಿ ಹಾಗೂ ನಿಯಮಗಳು ರಾಜ್ಯಕ್ಕೆ ಅನ್ವಯವಾಗುವುದೇ ಅಥವಾ ಜಿಲ್ಲೆಗೆ ಅನ್ವಯವಾಗುವುದೇ ವಿವರಣೆ ನೀಡುವುದು ?

## ನಗರ ಪ್ರದೇಶ ಹಸರೀಕರಣಗೊಳಿಸುವ ಕುರಿತು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೭೭ (೨೬೦೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರ ಪ್ರದೇಶಗಳನ್ನು ಹಸರೀಕರಣಗೊಳಿಸಲು ಪ್ರಸಕ್ತ ಸಾಲಿನಲ್ಲಿ ಸರ್ಕಾರ ಬಿಡುಗಡೆಗೊಳಿಸಿರುವ ಅನುದಾನ ಎಷ್ಟು ; ಬಳಕೆಯಾಗಿರುವ ಹಾಗೂ ಬಳಕೆಯಾಗದ ಅನುದಾನ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಯಾವ ಮಾನದಂಡಗಳ ಆಧಾರದ ಮೇಲೆ ಈ ಯೋಜನೆಗೆ ಸ್ಥಳಗಳನ್ನು ಆಯ್ಕೆ ಮಾಡಲಾಗುವುದು ;

(ಇ) ಯಾವ ಯಾವ ನಗರ ಪ್ರದೇಶಗಳನ್ನು ಹಸರೀಕರಣಗೊಳಿಸಲು ಸರ್ಕಾರ ಉದ್ದೇಶಿಸಿದೆ ;

(ಈ) ಈಗಾಗಲೇ ಯಾವ ಯಾವ ನಗರ ಪ್ರದೇಶಗಳನ್ನು ಹಸರೀಕರಣಗೊಳಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಬಾಲ ಕಾರ್ಮಿಕರ ಸ್ಥಿತಿಗತಿಗಳ ಕುರಿತು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೭೮ (೨೬೦೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಬಾಲ ಕಾರ್ಮಿಕರುಗಳ ಸ್ಥಿತಿಗತಿ ಕುರಿತಾದ ಅಂಕಿ ಅಂಶಗಳನ್ನು ಒದಗಿಸುವುದು ;

(ಆ) ಬಾಲ ಕಾರ್ಮಿಕರುಗಳಿಗೆ ಪುನರ್ವಸತಿ ಕಲ್ಪಿಸುವ ದಿಶೆಯಲ್ಲಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು ; (ವಿವರ ನೀಡುವುದು)

(ಇ) ಬಾಲ ಕಾರ್ಮಿಕ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇರುವ ಕಾರ್ಪಸ್ ನಿಧಿ ಮತ್ತು ಅದರ ಬಳಕೆ ಕುರಿತಾದ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಸರ್ಕಾರಿ ಭೂಮಿ ಹಂಚಿಕೆ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೭೭ (೨೫೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಂದಾಯ ಇಲಾಖೆ ವಶದಲ್ಲಿರುವ ಸರ್ಕಾರಿ ಜಮೀನು ಎಷ್ಟು ;

(ಆ) ಈ ಪೈಕಿ ಕಳೆದ ೩ ವರ್ಷದಲ್ಲಿ ವಿವಿಧ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಜಮೀನು ಎಷ್ಟು ; ಸಂಸ್ಥೆಯ ಹೆಸರು ಮತ್ತು ವಿಳಾಸದೊಂದಿಗೆ ಜಿಲ್ಲೆ ಮತ್ತು ತಾಲ್ಲೂಕುವಾರು ವಿವರ ನೀಡುವುದು ;

(ಇ) ಈ ಸಂಘ ಸಂಸ್ಥೆಗಳಿಗೆ ಜಮೀನು ಹಂಚಿಕೆ ಮಾಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡವೇನು ;

(ಈ) ಈ ಯಾವ ಉದ್ದೇಶಕ್ಕಾಗಿ ಜಮೀನನ್ನು ಹಂಚಿಕೆ ಮಾಡಲಾಗಿತ್ತೋ ಆ ಉದ್ದೇಶಕ್ಕಾಗಿ ಸಂಘ ಸಂಸ್ಥೆಗಳು ಉಪಯೋಗಿಸಿಕೊಂಡಿವೆಯೇ ; (ಜಿಲ್ಲಾವಾರು ವಿವರ ನೀಡುವುದು)

(ಉ) ನಿರ್ದಿಷ್ಟ ಉದ್ದೇಶಕ್ಕಾಗಿ ಜಮೀನನ್ನು ಬಳಸಿಕೊಳ್ಳದ ಸಂಘ ಸಂಸ್ಥೆಗಳಿಂದ ಸರ್ಕಾರ ಜಮೀನನ್ನು ಹಿಂಪಡೆದಿದೆಯೇ ? (ಜಿಲ್ಲಾವಾರು ವಿವರ ನೀಡುವುದು)

## ಹೊಸ ತಾಲ್ಲೂಕು ರಚನೆ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೮೦ (೨೬೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೊಸ ತಾಲ್ಲೂಕುಗಳ ಘೋಷಣೆಯ ಬಗ್ಗೆ ವಿವಿಧ ಸಮಿತಿಗಳು ಸರ್ಕಾರಕ್ಕೆ ನೀಡಿರುವ ವರದಿಯ ಅನ್ವಯ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಷ್ಟು ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಲಾಗಿದೆ ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಘೋಷಣೆ ಮಾಡಿದ್ದಲ್ಲಿ, ಇವುಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ವೆಚ್ಚ ಮಾಡಲಾಗಿರುವ ಹಣವೆಷ್ಟು ; ಈ ಹೊಸ ತಾಲ್ಲೂಕುಗಳಲ್ಲಿ ಯಾವ–ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ;

(ಇ) ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು ;

(ಈ) ಪ್ರಸಕ್ತ ಸಾಲಿನಲ್ಲಿ ಇನ್ನೂ ಯಾವ–ಯಾವ ಸ್ಥಳಗಳನ್ನು ಹೊಸ ತಾಲ್ಲೂಕುಗಳೆಂದು ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ ;

## ಕೆರೆ ಅತಿಕ್ರಮಣ ತೆರವುಗೊಳಿಸುವ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೧೮೧ (೨೬೦೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; ಅವು ಯಾವುವು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕೆರೆಗಳನ್ನು ಸಾರ್ವಜನಿಕರು ಒತ್ತುವರಿ/ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಎಷ್ಟು ಕೆರೆಗಳನ್ನು ಒತ್ತುವರಿ ಹಾಗೂ ಅತಿಕ್ರಮಣ ಮಾಡಿಕೊಳ್ಳಲಾಗಿದೆ ; (ಹೆಕ್ಟೇರುವಾರು ವಿವರ ನೀಡುವುದು)

(ಈ) ಅತಿಕ್ರಮಣ ಮಾಡಿರುವವರ ವಿರುದ್ಧ ಸರ್ಕಾರ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ ; ಎಷ್ಟು ಹೆಕ್ಟೇರ್ ಪ್ರದೇಶವನ್ನು ಅತಿಕ್ರಮಣಕಾರರಿಂದ ವಶಪಡಿಸಿಕೊಳ್ಳಲಾಗಿದೆ ; (ವಿವರ ನೀಡುವುದು)

(ಉ) ಈ ಕೆರೆಗಳಲ್ಲಿ ಹೂಳು ತುಂಬಿಕೊಂಡಿದ್ದು, ನೀರಿನ ಸಂಗ್ರಹಣೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೨ ವರ್ಷಗಳಿಂದ ಎಷ್ಟು ಕೆರೆಗಳಲ್ಲಿ ಹೂಳನ್ನು ತೆಗೆಯಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಊ) ಕೆರೆಗಳಲ್ಲಿ ಒತ್ತುವರಿ/ಅತಿಕ್ರಮಣ ಮಾಡದಂತೆ ಹಾಗೂ ಕೆರೆಗಳಲ್ಲಿ ಅಂತರ್ಜಲ ಹೆಚ್ಚಿಸಲು ಸರ್ಕಾರವು ಯಾವ-ಯಾವ ಯೋಜನೆಗಳನ್ನು ಹಾಕಿಕೊಂಡಿದೆ ? (ವಿವರ ನೀಡುವುದು)

## ಬಾಲ ಕಾರ್ಮಿಕರ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾದವರು) :–**

೨೧೮೨ (೨೬೨೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಮ್ಮ ರಾಜ್ಯದ ಹೋಟೆಲ್‌ಗಳಲ್ಲಿ ಮನೆಗಳಲ್ಲಿ, ವ್ಯಾಪಾರ ಮಳಿಗೆಗಳಲ್ಲಿ, ಸಣ್ಣ ಕೈಗಾರಿಕೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರವು ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಕೈಗೊಂಡ ಕ್ರಮಗಳೇನು ; ಈಗಾಗಲೇ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ;

(ಇ) ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನರಿಗೆ ಶಿಕ್ಷೆ ವಿಧಿಸಲಾಗಿದೆ ಮತ್ತು ಶಿಕ್ಷೆಯ ಪ್ರಮಾಣವೇನು ;

(ಈ) ಬಾಲ ಕಾರ್ಮಿಕರ ವಿಚಾರದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

## ಡೀಮ್ಡ್ ಫಾರೆಸ್ಟ್ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾದವರು) :–**

೨೧೮೩ (೨೬೨೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಕೃಷಿ ಭೂಮಿಯನ್ನು ರೈತರು ಉಳುಮೆ ಮಾಡುತ್ತಿದ್ದು, ಸದರಿ ಭೂಮಿಯನ್ನು ಅರಣ್ಯ ಇಲಾಖೆಯು ಡೀಮ್ಡ್ ಫಾರೆಸ್ಟ್‌ಗೆ ಸೇರ್ಪಡೆಗೊಳಿಸುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರದಿಂದ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಈಗಾಗಲೇ ಡೀವ್ಡ್ ಫಾರೆಸ್ಟ್ ಎಂದು ಘೋಷಿಸಿರುವ ಪ್ರದೇಶಗಳಾವುವು; (ತಾಲ್ಲೂಕುವಾರು ಸರ್ವೆ ನಂಬರ್‌ವಾರು ಸಂಪೂರ್ಣ ವಿವರ ನೀಡುವುದು)

(ಈ) ಮುಳುಗಡೆ ಸಂತ್ರಸ್ಥರಿಗೆ ಹಂಚಲು ನಿಗದಿಪಡಿಸಿರುವ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಪಟ್ಟಿಗೆ ಸೇರಿಸಿ, ಮಂಜೂರಾತಿಯಾದ ಸಂತ್ರಸ್ಥರಿಗೆ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ನೀಡದೇ, ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

(ಉ) ಮುಳುಗಡೆ ಸಂತ್ರಸ್ಥರಿಗೆ ಈಗಾಗಲೇ ಮಂಜೂರಾತಿ ಆಗಿ ಕೃಷಿ ಮಾಡುತ್ತಿರುವ ಜಮೀನನ್ನು ಡೀಮ್ಡ್ ಫಾರೆಸ್ಟ್‌ಗೆ ಸೇರಿಸಿದ್ದು, ರೈತರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಬೆಳಗಾವಿ ಜಿಲ್ಲೆಯಲ್ಲಿರುವ ಕ್ರೀಡಾಪಟುಗಳ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾದವರು) :–**

೨೧೮೪ (೨೬೨೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಹಾಗೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿ, ಕ್ರೀಡೆಗಳನ್ನು ವೃದ್ಧಿಗೊಳಿಸಲು ಇಲಾಖೆಯ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

(ಆ) ಬೆಳಗಾವಿ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡಾಪಟುಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)

(ಇ) ವಿವಿಧ ಕ್ರೀಡೆಗಳಿಗೆ ಸಂಬಂಧಿಸಿದಂತೆ ಇರುವ ಕ್ರೀಡಾ ಕೇಂದ್ರಗಳ ಸಂಖ್ಯೆ ಎಷ್ಟು; ಕ್ರೀಡಾ ಚಟುವಟಿಕೆಗಳನ್ನು ಹೆಚ್ಚಿಸಲು ಮತ್ತು ಕ್ರೀಡಾಪಟುಗಳನ್ನು ಹೊಸದಾಗಿ ಆಯ್ಕೆ ಮಾಡಲು ಸರ್ಕಾರವು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?

## ವಿವಿಧ ಕಾಮಗಾರಿಗಳ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾದವರು) :–**

೨೧೮೫ (೨೬೨೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವಿವಿಧ ಕಾಮಗಾರಿಗಳಿಗೆ ೨೦೧೪–೧೫ ಮತ್ತು ೨೦೧೫–೧೬ರ ಆಯವ್ಯಯದಲ್ಲಿ ಮೀಸಲಿಟ್ಟ ಹಣದ ಮೊತ್ತವೆಷ್ಟು;

(ಆ) ಹಾಗಿದ್ದಲ್ಲಿ, ವೆಚ್ಚ ಮಾಡಿರುವ ಹಣದ ಮೊತ್ತ ಎಷ್ಟು? (ತಾಲ್ಲೂಕುವಾರು ಮತ್ತು ಕಾಮಗಾರಿವಾರು ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 202/800 ಪ್ರತಿಗಳು/13–11–2015